# ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995

(1996ರ ಅಧಿನಿಯಮ ಸಂಖ್ಯೆ 1996ರ 1)

**[19.04.2004ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 29ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 79 ರಿಂದ 104ರ ವರೆಗಿನ ಪುಟಗಳಲ್ಲಿ ಪ್ರಕಟಿತ.]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ – I
### ಪ್ರಾರಂಭಿಕ

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

### ಅಧ್ಯಾಯ – II
### ಕೇಂದ್ರ ಸಮನ್ವಯ ಸಮಿತಿ

3. ಕೇಂದ್ರ ಸಮನ್ವಯ ಸಮಿತಿ
4. ಸದಸ್ಯರ ಪದಾವಧಿ
5. ಅನರ್ಹತೆಗಳು
6. ಸದಸ್ಯರು ಸ್ಥಾನಗಳನ್ನು ಖಾಲಿ ಮಾಡುವುದು
7. ಕೇಂದ್ರ ಸಮನ್ವಯ ಸಮಿತಿಯ ಸಭೆಗಳು
8. ಕೇಂದ್ರ ಸಮನ್ವಯ ಸಮಿತಿಯ ಪ್ರಕಾರ್ಯಗಳು
9. ಕೇಂದ್ರ ಕಾರ್ಯನಿರ್ವಾಹಕ ಸಮಿತಿ
10. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಕಾರ್ಯಗಳು
11. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಭೆಗಳು
12. ನಿರ್ದಿಷ್ಟ ಉದ್ದೇಶಕ್ಕಾಗಿ ಕೇಂದ್ರ ಕಾರ್ಯನಿರ್ವಾಹಕ ಸಮಿತಿಗೆ ಜನರ ತಾತ್ಕಾಲಿಕ ಸಹ ಸದಸ್ಯತ್ವ

### ಅಧ್ಯಾಯ – III
### ರಾಜ್ಯ ಸಮನ್ವಯ ಸಮಿತಿ

13. ರಾಜ್ಯ ಸಮನ್ವಯ ಸಮಿತಿ
14. ಸದಸ್ಯರ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು
15. ಅನರ್ಹತೆಗಳು

16. ಸ್ಥಾನಗಳನ್ನು ಖಾಲಿ ಮಾಡುವುದು
17. ರಾಜ್ಯ ಸಮನ್ವಯ ಸಮಿತಿಯ ಸಭೆಗಳು
18. ರಾಜ್ಯ ಸಮನ್ವಯ ಸಮಿತಿಯ ಪ್ರಕಾರ್ಯಗಳು
19. ರಾಜ್ಯ ಕಾರ್ಯನಿರ್ವಾಹಕ ಸಮಿತಿ
20. ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಕಾರ್ಯಗಳು
21. ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಭೆಗಳು
22. ನಿರ್ದಿಷ್ಟ ಉದ್ದೇಶಕ್ಕಾಗಿ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಜನರ ತಾತ್ಕಾಲಿಕ ಸಹ ಸದಸ್ಯತ್ವ
23. ನಿರ್ದೇಶನಗಳನ್ನು ನೀಡುವ ಅಧಿಕಾರ
24. ಖಾಲಿ ಸ್ಥಾನಗಳು ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು

## ಅಧ್ಯಾಯ – IV
## ಅಂಗವಿಕಲತೆಯನ್ನು ತಡೆಗಟ್ಟುವುದು ಮತ್ತು ಪ್ರಾರಂಭದಲ್ಲಿಯೇ ಪತ್ತೆ ಹಚ್ಚುವುದು

25. ಅಂಗವಿಕಲತೆ ಉಂಟಾಗುವುದನ್ನು ತಡೆಗಟ್ಟುವುದಕ್ಕಾಗಿ ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಕೈಗೊಳ್ಳತಕ್ಕ ಕೆಲವು ಕ್ರಮಗಳು

## ಅಧ್ಯಾಯ – V
## ಶಿಕ್ಷಣ

26. ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಮಕ್ಕಳಿಗೆ ಉಚಿತ ಶಿಕ್ಷಣ ಇತ್ಯಾದಿಗಳನ್ನು ಒದಗಿಸುವುದು
27. ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಔಪಚಾರಿಕವಲ್ಲದ ಶಿಕ್ಷಣ, ಇತ್ಯಾದಿಗಳಿಗಾಗಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು
28. ಅಂಗವಿಕಲ ಮಕ್ಕಳಿಗೆ ನೆರವಾಗುವ ಹೊಸ ಸಾಧನ ಸಲಕರಣೆಗಳನ್ನು, ಬೋಧನಾ ಸಾಮಗ್ರಿ ಇತ್ಯಾದಿಗಳನ್ನು ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಗೊಳಿಸುವ ಬಗ್ಗೆ ಸಂಶೋಧನೆ
29. ಅಂಗವಿಕಲ ಮಕ್ಕಳಿಗಾಗಿ ಶಾಲೆಗಳಲ್ಲಿ ತರಬೇತಿ ಪಡೆದ ಮಾನವ ಶಕ್ತಿಯನ್ನು ವೃದ್ಧಿಗೊಳಿಸಲು ಸಂಬಂಧಪಟ್ಟ ಸರ್ಕಾರಗಳು ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು
30. ಸಂಬಂಧಪಟ್ಟ ಸರ್ಕಾರಗಳು ಸಾರಿಗೆ ಸೌಲಭ್ಯ, ಪುಸ್ತಕ ಇತ್ಯಾದಿಗಳನ್ನು ಒದಗಿಸುವುಕ್ಕಾಗಿ ಸಮಗ್ರ ಶಿಕ್ಷಣ ಯೋಜನೆಯನ್ನು ರೂಪಿಸುವುದು
31. ಶೈಕ್ಷಣಿಕ ಸಂಸ್ಥೆಗಳು, ದೃಷ್ಟಿದೋಷವಿರುವ ವಿದ್ಯಾರ್ಥಿಗಳಿಗೆ ಉಕ್ತಲೇಖಕರನ್ನು ಒದಗಿಸುವುದು

## ಅಧ್ಯಾಯ – VI
## ಉದ್ಯೋಗ

32. ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಿಡಬಹುದಾದ ಹುದ್ದೆಗಳನ್ನು ಗುರ್ತಿಸುವುದು
33. ಹುದ್ದೆಗಳ ಮೀಸಲಾತಿ

34. ವಿಶೇಷ ಉದ್ಯೋಗ ವಿನಿಮಯ ಕೇಂದ್ರ
35. ಯಾವುದೇ ಕಾರ್ಯಸಂಸ್ಥೆಯ ವಶದಲ್ಲಿರುವ ದಾಖಲೆಯನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕೆ ಅಧಿಕಾರ
36. ಭರ್ತಿಮಾಡದೇ ಇರುವ ಖಾಲಿ ಹುದ್ದೆಗಳನ್ನು ಮುಂದುವರೆಸಿಕೊಂಡು ಹೋಗುವುದು
37. ನಿಯೋಜಕರು ದಾಖಲೆಗಳನ್ನು ನಿರ್ವಹಿಸುವುದು
38. ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ ದೊರಕುವುದನ್ನು ಖಚಿತಪಡಿಸಿಕೊಳ್ಳುವ ಯೋಜನೆ
39. ಎಲ್ಲ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳಿಗೆ ಸ್ಥಾನಗಳನ್ನು ಮೀಸಲಿಡುವುದು
40. ದಾರಿದ್ರ್ಯ ನಿವಾರಣಾ ಯೋಜನೆಗಳಲ್ಲಿ ಖಾಲಿ ಸ್ಥಾನಗಳನ್ನು ಮೀಸಲಿಡುವುದು
41. ನಿಯೋಜಕರು ತಮ್ಮಲ್ಲಿರುವ ಕೆಲಸಗಾರರ ಸಂಖ್ಯೆಯಲ್ಲಿ ಶೇಕಡಾ ಐದರಷ್ಟು ಅಂಗವಿಕಲ ನೌಕರರೇ ಇದ್ದಾರೆಂದು ಖಚಿತಪಡಿಸಿದರೆ ಅಂಥ ನಿಯೋಜಕರಿಗೆ ಪ್ರೋತ್ಸಾಹಕಗಳು.

## ಅಧ್ಯಾಯ – VII
## ದೃಢೀಕರಿಸುವ ಕ್ರಮ

42. ಅಂಗವಿಕಲ ವ್ಯಕ್ತಿಗಳಿಗೆ ಸಾಧನಗಳು ಮತ್ತು ಉಪಕರಣಗಳು
43. ಕೆಲವು ಉದ್ದೇಶಗಳಿಗಾಗಿ ಭೂಮಿಯನ್ನು ಆದ್ಯತೆಯ ಮೇಲೆ ಹಂಚಿಕೆ ಮಾಡುವಂತಹ ಯೋಜನೆಗಳು

## ಅಧ್ಯಾಯ – VIII
## ಭೇದಭಾವ ಮಾಡದಿರುವುದು

44. ಸಾರಿಗೆ ವ್ಯವಸ್ಥೆಯಲ್ಲಿ ಭೇದಭಾವ ಮಾಡದಿರುವುದು
45. ರಸ್ತೆ ಬಳಕೆ ವಿಷಯದಲ್ಲಿ ಭೇದಭಾವ ಮಾಡದಿರುವುದು
46. ಕಟ್ಟಡ ಪ್ರದೇಶದಲ್ಲಿ ಭೇದಭಾವ ಮಾಡದಿರುವುದು
47. ಸರ್ಕಾರಿ ಉದ್ಯೋಗದಲ್ಲಿ ಭೇದಭಾವ ಮಾಡದಿರುವುದು

## ಅಧ್ಯಾಯ – IX
## ಸಂಶೋಧನೆ ಮತ್ತು ಮಾನವ ಶಕ್ತಿ ಅಭಿವೃದ್ಧಿ

48. ಸಂಶೋಧನೆ
49. ಸಂಶೋಧನೆ ಕೈಗೊಳ್ಳಲು ಸಾಧ್ಯವಾಗುವಂತೆ ವಿಶ್ವವಿದ್ಯಾಲಯಗಳಿಗೆ ಹಣಕಾಸು ನೆರವು ಒದಗಿಸುವುದು

## ಅಧ್ಯಾಯ – X
## ಅಂಗವಿಕಲ ವ್ಯಕ್ತಿಗಳಿಗಾಗಿರುವ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು

50. ಸಕ್ಷಮ ಪ್ರಾಧಿಕಾರ
51. ನೋಂದಣಿ ಪ್ರಮಾಣ ಪತ್ರದ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ಸ್ಥಾಪಿಸದಿರುವುದು ಅಥವಾ ನಿರ್ವಹಿಸದಿರುವುದು
52. ನೋಂದಣಿ ಪ್ರಮಾಣ ಪತ್ರ
53. ಪ್ರಮಾಣ ಪತ್ರದ ರದ್ದಿಯಾತಿ

54. ಅಪೀಲು

55. ಕೇಂದ್ರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಈ ಅಧಿನಿಯಮ ಅನ್ವಯವಾಗದಿರುವುದು

## ಅಧ್ಯಾಯ – XI
### ತೀವ್ರ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆ

56. ತೀವ್ರ ಅಂಗವಿಕಲತೆ ಹೊಂದಿದ ವ್ಯಕ್ತಿಗಳಿಗಾಗಿರುವ ಸಂಸ್ಥೆ

## ಅಧ್ಯಾಯ – XII
### ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಕಮಿಷನರು ಮತ್ತು ಕಮಿಷನರುಗಳು

57. ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಕಮಿಷನರುಗಳ ನೇಮಕ

58. ಮುಖ್ಯ ಕಮಿಷನರ ಪ್ರಕಾರ್ಯಗಳು

59. ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ನಿರಾಕರಿಸುವುದಕ್ಕೆ ಸಂಬಂಧಪಟ್ಟ ದೂರುಗಳನ್ನು ಮುಖ್ಯ ಕಮಿಷನರು ಗಮನಿಸುವುದು

60. ಅಂಗವಿಕಲ ವ್ಯಕ್ತಿಗಳಿಗಾಗಿ ಕಮಿಷನರುಗಳ ನೇಮಕ

61. ಕಮಿಷನರ್ ಅಧಿಕಾರಗಳು

62. ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ನಿರಾಕರಿಸಿರುವುದಕ್ಕೆ ಸಂಬಂಧಪಟ್ಟ ದೂರುಗಳನ್ನು ಕಮಿಷನರು ಗಮನಿಸುವುದು

63. ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರುವುದು

64. ಮುಖ್ಯ ಕಮಿಷನರು ವಾರ್ಷಿಕ ವರದಿಯನ್ನು ತಯಾರಿಸುವುದು

65. ಕಮಿಷನರು ವಾರ್ಷಿಕ ವರದಿಯನ್ನು ತಯಾರಿಸುವುದು

## ಅಧ್ಯಾಯ – XIII
### ಸಾಮಾಜಿಕ ಭದ್ರತೆ

66. ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಪುನರ್ ವ್ಯವಸ್ಥೆಯನ್ನು ಕೈಗೊಳ್ಳುವುದು

67. ಅಂಗವಿಕಲ ನೌಕರರ ವಿಮಾ ಯೋಜನೆ

68. ನಿರುದ್ಯೋಗ ಭತ್ಯೆ

## ಅಧ್ಯಾಯ – XIV
### ಸಂಕೀರ್ಣ

69. ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡಿದ್ದಕ್ಕೆ ದಂಡನೆ

70. ಮುಖ್ಯ ಕಮಿಷನರು, ಕಮಿಷನರುಗಳು, ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯು ಲೋಕ ನೌಕರರಾಗಿರುವುದು

71. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ

72. ಅಧಿನಿಯಮವು ಯಾವುದೇ ಇತರ ಕಾನೂನಿನ ಜೊತೆಗೆ ಇರುವುದು, ಆದರೆ ಅದನ್ನು ಅಲ್ಪೀಕರಿಸದಿರುವುದು

73. ಸಮುಚಿತ ಸರ್ಕಾರದ ನಿಯಮ ರಚನಾಧಿಕಾರ

74. ನಿರಸಿತ

# ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995

(1996 ರ ಅಧಿನಿಯಮ ಸಂಖ್ಯೆ 1)

[1ನೇ ಜನವರಿ, 1996 ]

ಏಷ್ಯಾ ಮತ್ತು ಪೆಸಿಫಿಕ್ ಪ್ರಾಂತ್ಯಗಳಲ್ಲಿನ ಅಂಗವಿಕಲ ವ್ಯಕ್ತಿಗಳ ಪೂರ್ಣ ಭಾಗವಹಿಸುವಿಕೆ ಮತ್ತು ಸಮಾನತೆಯ ಬಗೆಗಿನ ಉದ್ಘೋಷಣೆಯನ್ನು ಜಾರಿಗೆ ತರುವ ಅಧಿನಿಯಮ.

ಏಷ್ಯಾ ಮತ್ತು ಫೆಸಿಫಿಕ್ ಅಂಗವಿಕಲ ವ್ಯಕ್ತಿಗಳ ದಶಕದ (1993-2002) ಪ್ರಾರಂಭದ ಅಂಗವಾಗಿ ಏಷ್ಯಾ ಮತ್ತು ಪೆಸಿಫಿಕ್‌ನ ಆರ್ಥಿಕ ಮತ್ತು ಸಾಮಾಜಿಕ ಆಯೋಗವು 1992ರ ಡಿಸೆಂಬರ್ 1 ರಿಂದ 5ರ ವರೆಗೆ ಬೀಜಿಂಗ್‌ನಲ್ಲಿ ನಡೆಸಿದ ಸಭೆಯಲ್ಲಿ ಏಷ್ಯಾ ಮತ್ತು ಪೆಸಿಫಿಕ್ ಪ್ರಾಂತ್ಯದಲ್ಲಿ ಅಂಗವಿಕಲ ವ್ಯಕ್ತಿಗಳ ಪೂರ್ಣ ಭಾಗವಹಿಸುವಿಕೆ ಮತ್ತು ಸಮಾನತೆ ಬಗ್ಗೆ ಉದ್ಘೋಷಣೆಯನ್ನು ಅಂಗೀಕರಿಸಿರುವುದರಿಂದ;

ಸದರಿ ಉದ್ಘೋಷಣೆಗೆ ಭಾರತವು ಸಹ ರುಜು ಮಾಡಿರುವುದರಿಂದ;

ಮೇಲೆ ಹೇಳಿದ ಉದ್ಘೋಷಣೆಯನ್ನು ಜಾರಿಗೆ ತರುವುದು ಅಗತ್ಯವೆಂದು ಭಾವಿಸಿರುವುದರಿಂದ;

ಭಾರತ ಗಣರಾಜ್ಯದ ನಲವತ್ತಾರನೇ ವರ್ಷದಲ್ಲಿ ಸಂಸತ್ತು ಈ ಮುಂದಿನಂತೆ ಅಧಿನಿಯಮಿಸತಕ್ಕದ್ದು: -

## ಅಧ್ಯಾಯ - I

## ಪ್ರಾರಂಭಿಕ

**1.ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 ಎಂದು ಕರೆಯತಕ್ಕದ್ದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಅನ್ವಯವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

* ದಿನಾಂಕ: 7.2.1996ರಿಂದ ಜಾರಿಗೆ ಬಂದಿದೆ. ಎಸ್.ಓ.107(ಈ)

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಎ) "ಸಮುಚಿತ ಸರ್ಕಾರ " ಎಂದರೆ,-

(i) ಕೇಂದ್ರ ಸರ್ಕಾರಕ್ಕೆ ಅಥವಾ ಆ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವು ಪಡೆದಿರುವ ಯಾವುದೇ ಸಂಸ್ಥೆಗೆ ಅಥವಾ ದಂಡು ಪ್ರದೇಶ ಅಧಿನಿಯಮ, 1924ರ ಮೇರೆಗೆ ರಚಿತವಾದ ದಂಡು ಪ್ರದೇಶ ಮಂಡಲಿಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರ;

(ii) ರಾಜ್ಯ ಸರ್ಕಾರಕ್ಕೆ ಅಥವಾ ಆ ಸರ್ಕಾರದಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ನೆರವು ಪಡೆದಿರುವ ಯಾವುದೇ ಸಂಸ್ಥೆಗೆ ಅಥವಾ ದಂಡು ಪ್ರದೇಶ ಮಂಡಲಿಯನ್ನು ಹೊರತುಪಡಿಸಿ, ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ, ರಾಜ್ಯ ಸರ್ಕಾರ;

(iii) ಕೇಂದ್ರ ಸಮನ್ವಯ ಸಮಿತಿ ಮತ್ತು ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಗೆ ಸಂಬಂಧಪಟ್ಟಂತೆ, ಕೇಂದ್ರ ಸರ್ಕಾರ;

( iv) ರಾಜ್ಯ ಸಮನ್ವಯ ಸಮಿತಿ ಮತ್ತು ರಾಜ್ಯ ಕಾರ್ಯ ನಿರ್ವಾಹಕ ಸಮಿತಿಗೆ ಸಂಬಂಧಪಟ್ಟಂತೆ, ರಾಜ್ಯ ಸರ್ಕಾರ;

(ಬಿ) "ಅಂಧತ್ವ" ಎಂದರೆ ಒಬ್ಬ ವ್ಯಕ್ತಿಯು ಈ ಕೆಳಕಂಡ ದೋಷಗಳ ಪೈಕಿ ಯಾವುದಾದರೂ ಒಂದರಿಂದ ಬಳಲುತ್ತಿರುವುದು; ಎಂದರೆ:-

(i) ಸಂಪೂರ್ಣ ದೃಷ್ಟಿಹೀನತೆ; ಅಥವಾ

(ii) ಕನ್ನಡಕ ಹಾಕಿಕೊಂಡಾಗ ಕಣ್ಣಿನ ದೃಷ್ಟಿ ಸರಿಹೋಗಿ, ಕಣ್ಣಿನ ದೃಷ್ಟಿ ಶಕ್ತಿಯು 6/60 ಅಥವಾ 20/200 (ಸ್ನೆಲ್ಲೆನ್) ಕ್ಕಿಂತ ಮೀರದಷ್ಟು ಇರುವುದು; ಅಥವಾ

(iii) ಕಣ್ಣಿನ ದೃಷ್ಟಿ ಎಲ್ಲಿಯವರೆಗೆ ಕಾಣುವುದೋ ಆ ದೂರದ ಮಿತಿ 20 ಡಿಗ್ರಿ ಕೋನದಷ್ಟು ಕಾಣುತ್ತಿರುವುದು ಅಥವಾ ಅದಕ್ಕಿಂತ ತೀರಾ ಕಡಿಮೆ ಇರುವುದು;

(ಸಿ) "ಕೇಂದ್ರ ಸಮನ್ವಯ ಸಮಿತಿ" ಎಂದರೆ 3ನೇ ಪ್ರಕರಣದ (1) ನೇ ಉಪ ಪ್ರಕರಣದ ಮೇರೆಗೆ ರಚಿಸಲಾದ ಕೇಂದ್ರ ಸಮನ್ವಯ ಸಮಿತಿ;

(ಡಿ) "ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ" ಎಂದರೆ 9ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ರಚಿಸಲಾದ ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ;

(ಇ) "ಮಿದುಳಿನ ಪಾರ್ಶ್ವವಾಯು" (ಸೆರೆಬ್ರಲ್‌ಪಾಲ್ಸಿ) ಎಂದರೆ ಪ್ರಸವ ಪೂರ್ವದ, ಪ್ರಸವ ಸಮಯದ ಅಥವಾ ಶೈಶವಾವಸ್ಥೆಯ ಬೆಳವಣಿಗೆ ಅವಧಿಯಲ್ಲಿ ಉಂಟಾಗುವ ಮಿದುಳು ದೀವು ಸ್ಥಿತಿಯ ಅಥವಾ ಗಾಯಗಳ ಪರಿಣಾಮವಾಗಿ ಅಸಾಮಾನ್ಯ ಚಲನ ನಿಯಂತ್ರಣ ಸ್ಥಿತಿಯ ಲಕ್ಷಣದಿಂದ ವ್ಯಕ್ತಿಯ ಗತಿ ನಿರೋಧ ಪರಿಸ್ಥಿತಿ;

(ಎಫ್) "ಮುಖ್ಯ ಕಮಿಷನರು" ಎಂದರೆ 57 ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಮುಖ್ಯ ಕಮಿಷನರು;

(ಜಿ) "ಕಮಿಷನರು" ಎಂದರೆ 60 ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಕಮಿಷನರು;

(ಹೆಚ್) "ಸಕ್ಷಮ ಪ್ರಾಧಿಕಾರ" ಎಂದರೆ 50 ನೇ ಪ್ರಕರಣದ ಮೇರೆಗೆ ನೇಮಕಗೊಂಡ ಪ್ರಾಧಿಕಾರ;

(ಐ) "ಅಂಗವಿಕಲತೆ" ಎಂದರೆ,-

(i) ಅಂಧತ್ವ;

(ii) ಮಂದದೃಷ್ಟಿ;

(iii) ವಾಸಿಯಾಗಿರುವ ಕುಷ್ಠರೋಗ;

(iv) ಕುಗ್ಗಿರುವ ಶ್ರವಣ ಶಕ್ತಿ;

(v) ಚಲನ ಶಕ್ತಿಯನ್ನು ಕಳೆದುಕೊಂಡಿರುವುದು;

(vi) ಬುದ್ಧಿ ಮಾಂದ್ಯತೆ;

(vii) ಮಾನಸಿಕ ಅಸ್ವಸ್ಥತೆ;

(ಜೆ) "ನಿಯೋಜಕ" ಎಂದರೆ,-

(i) ಸರ್ಕಾರದ ಸಂಬಂಧದಲ್ಲಿ, ಈ ಸಂಬಂಧವಾಗಿ ಇಲಾಖೆಯ ಮುಖ್ಯಸ್ಥನಿಂದ ಅಧಿಸೂಚಿತವಾದ ಪ್ರಾಧಿಕಾರ ಅಥವಾ ಅಂಥ ಪ್ರಾಧಿಕಾರವು ಅಧಿಸೂಚಿತವಾಗಿಲ್ಲದಿರುವಲ್ಲಿ, ಇಲಾಖಾ ಮುಖ್ಯಸ್ಥ; ಮತ್ತು

(ii) ಒಂದು ಕಾರ್ಯ ಸಂಸ್ಥೆಯ ಸಂಬಂಧದಲ್ಲಿ, ಆ ಕಾರ್ಯ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ;

(ಕೆ) "ಕಾರ್ಯ ಸಂಸ್ಥೆ" ಎಂದರೆ ಕೇಂದ್ರ, ಪ್ರಾಂತ್ಯ ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ ನಿಗಮ ಅಥವಾ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ಕಂಪನಿಗಳ ಅಧಿನಿಯಮ, 1956ರ 617 ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ, ಸರ್ಕಾರಿ ಕಂಪನಿಯ ಸ್ವಾಮ್ಯದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಅಥವಾ ಅವುಗಳಿಂದ ಸಹಾಯ ಧನ ಪಡೆಯುತ್ತಿರುವ ಪ್ರಾಧಿಕಾರ ಅಥವಾ ನಿಕಾಯ ಮತ್ತು ಅದರಲ್ಲಿ ಸರ್ಕಾರದ ಇಲಾಖೆಗಳೂ ಸೇರುತ್ತವೆ;

(ಎಲ್) "ಶ್ರವಣ ಶಕ್ತಿ ಕುಗ್ಗಿರುವುದು" ಎಂದರೆ ಪರಸ್ಪರ ಮಾತನಾಡುವಂಥ ಸಂದರ್ಭದಲ್ಲಿ ಶಬ್ದ ತರಂಗವನ್ನು ಸರಿಯಾಗಿರುವ ಕಿವಿಯು ಗ್ರಹಿಸುವಾಗ ಅರವತ್ತು ಡೆಸಿಬಲ್ ಅಥವಾ ಅದಕ್ಕೂ ಹೆಚ್ಚು ಸಾಮರ್ಥ್ಯವನ್ನು ಕಳೆದುಕೊಂಡಿರುವುದು;

(ಎಂ) "ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಸಂಸ್ಥೆ" ಎಂದರೆ ಅಂಗವಿಕಲ ವ್ಯಕ್ತಿಗಳನ್ನು ಬರಮಾಡಿಕೊಳ್ಳುವ, ಅವರನ್ನು ಸಂರಕ್ಷಣೆ ಮಾಡುವ, ಅವರಿಗೆ ಶಿಕ್ಷಣ, ತರಬೇತಿ ನೀಡುವ, ಪುನರ್ ವ್ಯವಸ್ಥೆ ಕಲ್ಪಿಸುವ ಅಥವಾ ಯಾವುದೇ ಇತರ ಸೇವೆ ಒದಗಿಸುವ ಸಂಸ್ಥೆ;

(ಎನ್) "ಕುಷ್ಠರೋಗ ವಾಸಿಯಾಗಿರುವ ವ್ಯಕ್ತಿ" ಎಂದರೆ ಕುಷ್ಠರೋಗವು ವಾಸಿಯಾಗಿರುವ ಆದರೆ ಈ ಮುಂದಿನವುಗಳಿಂದ ತೊಂದರೆ ಪಡುತ್ತಿರುವ ವ್ಯಕ್ತಿ,-

(i) ಕೈ ಅಥವಾ ಕಾಲುಗಳಲ್ಲಿ ಸಂವೇದನಾ ಶಕ್ತಿಯನ್ನು ಕಳೆದುಕೊಂಡಿರುವುದು ಮತ್ತು ಕಣ್ಣು ಅಥವಾ ಕಣ್ಣು ಉಬ್ಬುಗಳಲ್ಲಿ ಅರೆ ಪಾರ್ಶ್ವವಾಯು ಉಂಟಾಗಿರುವುದು ಆದರೆ ದೃಷ್ಟಿಗೋಚರ ವಿಕಾರ ಇಲ್ಲದಿರುವುದು;

(ii) ಕಣ್ಣು ಸ್ಪಷ್ಟವಾಗಿ ಕಾಣಿಸದೆ ಮತ್ತು ಅರೆ ಪಾರ್ಶ್ವವಾಯು ಉಂಟಾಗಿರುವ ಆದರೆ ದೈನಂದಿನ ದುಡಿಮೆಯ ಚಟುವಟಿಕೆಗಳಲ್ಲಿ ನಿರತವಾಗಲು ಸಾಧ್ಯವಾಗುವುದಕ್ಕೆ ಅವರ ಕೈಕಾಲುಗಳಲ್ಲಿ ಸಾಕಷ್ಟು ಚಲನಶೀಲತೆ ಇರುವಂಥ ವ್ಯಕ್ತಿ;

(iii) ವಿಪರೀತ ಅಂಗವಿಕಾರವಾಗಿರುವುದು ಹಾಗೂ ವಯಸ್ಸಾದಂತೆ ಯಾವುದೇ ಲಾಭದಾಯಕ ವೃತ್ತಿ ಕೈಗೊಳ್ಳಲು ಸಾಧ್ಯವಾಗದಿರುವುದು;

ಮತ್ತು "ವಾಸಿಯಾಗಿರುವ ಕುಷ್ಠರೋಗ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಓ) “ಚಲನ ಶಕ್ತಿಯ ವಿಕಲತೆ” ಎಂದರೆ ಮೂಳೆಗಳು, ಕೀಲುಗಳು ಅಥವಾ ಮಾಂಸಖಂಡಗಳ ದೋಷದಿಂದಾಗಿ ಅವಯವಗಳ ಚಲನೆಗೆ ಸಾಕಷ್ಟು ತೊಂದರೆಯಾಗಿರುವುದು ಅಥವಾ ಯಾವುದೇ ರೀತಿಯ ಮೆದುಳಿನ ಪಾರ್ಶ್ವವಾಯುವಿಗೆ ಒಳಗಾಗಿರುವುದು;

(ಪಿ) “ವೈದ್ಯಕೀಯ ಪ್ರಾಧಿಕಾರ” ಎಂದರೆ ಸಮುಚಿತ ಸರ್ಕಾರವು ಅಧಿಸೂಚನೆ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ನಿರ್ದಿಷ್ಟ ಪಡಿಸಿರುವ ಯಾವುದೇ ಆಸ್ಪತ್ರೆ ಅಥವಾ ಸಂಸ್ಥೆ;

(ಕ್ಯೂ) “ಮಾನಸಿಕ ಅಸ್ವಸ್ಥತೆ” ಎಂದರೆ ಮನೋವಿಕಲತೆಯನ್ನು ಹೊರತು ಪಡಿಸಿ ಯಾವುದೇ ಇತರ ಮಾನಸಿಕ ಅಸ್ವಸ್ಥತೆ;

(ಆರ್) “ಬುದ್ಧಿ ಮಾಂದ್ಯತೆ” ಎಂದರೆ ವ್ಯಕ್ತಿಯ ಮಾನಸಿಕ ಬೆಳವಣಿಗೆಯು ಕುಂಠಿತ ಅಥವಾ ಅಪೂರ್ಣವಾಗಿದ್ದರೆ, ಅಂದರೆ ಬುದ್ಧಿ ಶಕ್ತಿಯ ಮಟ್ಟವು ಸಾಧಾರಣ ಮಟ್ಟಕ್ಕಿಂತಲೂ ಕಡಿಮೆ ಇರುವ ಸ್ಥಿತಿ;

(ಎಸ್) “ಅಧಿಸೂಚನೆ” ಎಂದರೆ ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಟಿ) “ಅಂಗವಿಕಲ ವ್ಯಕ್ತಿ” ಎಂದರೆ ವೈದ್ಯಕೀಯ ಪ್ರಾಧಿಕಾರವು ಪ್ರಮಾಣೀಕರಿಸಿದ ರೀತಿಯಲ್ಲಿ ಯಾವುದೇ ಅಂಗವಿಕಲತೆಯ ಶೇಕಡ 40 ಕ್ಕಿಂತ ಕಡಿಮೆ ಇಲ್ಲದಷ್ಟು ಅಂಗವಿಕಲತೆಯಿಂದ ಬಳಲುತ್ತಿರುವ ವ್ಯಕ್ತಿ;

(ಯು) “ಮಂದ ದೃಷ್ಟಿಯ ವ್ಯಕ್ತಿ” ಎಂದರೆ ಚಿಕಿತ್ಸೆಯಾದ ಮೇಲೂ ಅಥವಾ ಉತ್ಕೃಷ್ಟ ವಿಧಾನದಿಂದ ಅಸಮಕೋನವನ್ನು ಸರಿಪಡಿಸಿಯಾದ ಮೇಲೂ ದುರ್ಬಲ ದೃಷ್ಟಿ ಸಾಮರ್ಥ್ಯ ಇರುವಂತಹ ಆದರೆ ಒಂದು ಕೆಲಸವನ್ನು ಯೋಜಿಸುವುದಕ್ಕೆ ಅಥವಾ ಮಾಡುವುದಕ್ಕೆ ಕಣ್ಣಿನ ಶಕ್ತಿಯನ್ನು ಬಳಕೆ ಮಾಡುತ್ತಿರುವ ಅಥವಾ ಬಳಕೆ ಮಾಡುವುದಕ್ಕೆ ಸಾಮರ್ಥ್ಯ ಇರುವ ವ್ಯಕ್ತಿ;

(ವಿ) “ನಿಯಮಿಸಲಾದುದು” ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಡಬ್ಲ್ಯೂ) “ಪುನರ್‌ವಸತಿ” ಇದು ಅಂಗವಿಕಲ ವ್ಯಕ್ತಿಗಳು, ಅವರ ದೈಹಿಕ, ಜ್ಞಾನವಾಹಕ, ಬುದ್ಧಿಗ್ರಾಹ್ಯ, ಮಾನಸಿಕ ಅಥವಾ ಸಾಮಾಜಿಕ ಕಾರ್ಯದ ಮಟ್ಟಗಳನ್ನು ಕಾಪಾಡಿಕೊಳ್ಳಲು ಸಾಧ್ಯಗೊಳಿಸುವ ಉದ್ದೇಶದಿಂದ ಕೂಡಿರುವ ಪ್ರಕ್ರಿಯೆ;

(ಎಕ್ಸ್) “ವಿಶೇಷ ಉದ್ಯೋಗ ವಿನಿಮಯ ಕೇಂದ್ರ” ಎಂದರೆ ರಿಜಿಸ್ಟರ್‌ಗಳನ್ನು ಇಡುವುದರ ಮೂಲಕವೋ ಅಥವಾ ಇತರೆ ರೀತಿಯಲ್ಲಿ ಈ ಮುಂದಿನ ಮಾಹಿತಿಗಳನ್ನು ಸಂಗ್ರಹಿಸಲು ಮತ್ತು ಒದಗಿಸಲು ಸರ್ಕಾರವು ಸ್ಥಾಪಿಸುವ ಮತ್ತು ನಿರ್ವಹಿಸುವ ಯಾವುದೇ ಕಚೇರಿ ಅಥವಾ ಸ್ಥಳ, ಅಂದರೆ,-

(i) ಅಂಗವಿಕಲತೆಯಿಂದ ಬಳಲುತ್ತಿರುವ ವ್ಯಕ್ತಿಗಳ ಪೈಕಿ ನೌಕರರನ್ನಾಗಿ ನೇಮಕ ಮಾಡಿಕೊಳ್ಳಬಯಸುವ ವ್ಯಕ್ತಿಗಳು;

(ii) ನೌಕರಿಯನ್ನು ಬಯಸುವ ಅಂಗವಿಕಲ ವ್ಯಕ್ತಿಗಳು;

(iii) ನೌಕರಿಯನ್ನು ಬಯಸುವ ಅಂಗವಿಕಲ ವ್ಯಕ್ತಿಗಳನ್ನು ನೇಮಕ ಮಾಡಬಹುದಾದ ಖಾಲಿ ಸ್ಥಾನಗಳು;

(ವೈ) “ರಾಜ್ಯ ಸಮನ್ವಯ ಸಮಿತಿ” ಎಂದರೆ 13 ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಸಮನ್ವಯ ಸಮಿತಿ;

(ಜಡ್) "ರಾಜ್ಯ ಕಾರ್ಯ ನಿರ್ವಾಹಕ ಸಮಿತಿ" ಎಂದರೆ 19 ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಕಾರ್ಯನಿರ್ವಾಹಕ ಸಮಿತಿ.

## ಅಧ್ಯಾಯ - II

## ಕೇಂದ್ರ ಸಮನ್ವಯ ಸಮಿತಿ

**3.ಕೇಂದ್ರ ಸಮನ್ವಯ ಸಮಿತಿ:-** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ಕೇಂದ್ರ ಸಮನ್ವಯ ಸಮಿತಿ ಎಂದು ಕರೆಯಲಾಗುವ ಒಂದು ನಿಕಾಯವನ್ನು ರಚಿಸತಕ್ಕದ್ದು.

(2) ಕೇಂದ್ರ ಸಮನ್ವಯ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು

(ಎ) ಕೇಂದ್ರ ಸರ್ಕಾರದ ಕಲ್ಯಾಣ ಇಲಾಖೆಯ ಮಂತ್ರಿ, ಪದನಿಮಿತ್ತ ಅಧ್ಯಕ್ಷ;

(ಬಿ) ಕೇಂದ್ರ ಸರ್ಕಾರದ ಕಲ್ಯಾಣ ಇಲಾಖೆಯ ರಾಜ್ಯ ಮಂತ್ರಿ, ಪದನಿಮಿತ್ತ ಉಪಾಧ್ಯಕ್ಷ;

(ಸಿ) ಕಲ್ಯಾಣ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ವೆಚ್ಚ, ಸಿಬ್ಬಂದಿ, ತರಬೇತಿ ಮತ್ತು ಸಾರ್ವಜನಿಕ ಕುಂದುಕೊರತೆಗಳು, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಕೈಗಾರಿಕಾ ಅಭಿವೃದ್ಧಿ, ನಗರ ವ್ಯವಹಾರಗಳು ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ, ಕಾನೂನು ವ್ಯವಹಾರಗಳು, ಸಾರ್ವಜನಿಕ ಉದ್ಯಮಗಳು ಈ ಇಲಾಖೆಗಳ ಪ್ರಭಾರದಲ್ಲಿರುವ ಭಾರತ ಸರ್ಕಾರದ ಕಾರ್ಯದರ್ಶಿಗಳು-ಪದನಿಮಿತ್ತ ಸದಸ್ಯರು;

(ಡಿ) ಮುಖ್ಯ ಕಮಿಷನರು, ಪದನಿಮಿತ್ತ ಸದಸ್ಯ;

(ಇ) ಅಧ್ಯಕ್ಷ, ರೈಲ್ವೆ ಮಂಡಲಿ, ಪದನಿಮಿತ್ತ ಸದಸ್ಯರು;

(ಎಫ್) ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆಯ ಡೈರೆಕ್ಟರ್ ಜನರಲ್, ಪದನಿಮಿತ್ತ ಸದಸ್ಯ;

(ಜಿ) ನಿರ್ದೇಶಕ, ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು, ಪದನಿಮಿತ್ತ ಸದಸ್ಯ;

(ಹೆಚ್) ಮೂರು ಜನ ಸಂಸತ್ ಸದಸ್ಯರು, ಅವರಲ್ಲಿ ಇಬ್ಬರು ಲೋಕಸಭೆಗೆ ಮತ್ತೊಬ್ಬರು ರಾಜ್ಯ ಸಭೆಗೆ ಆಯ್ಕೆಯಾದ ಸದಸ್ಯರು;

(ಐ) ಪ್ರಾತಿನಿಧ್ಯವಿರಬೇಕೆಂದು ಸರ್ಕಾರವು ಅಭಿಪ್ರಾಯಪಡುವಂತಹ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡುವ ಮೂವರು;

(ಜೆ) ಈ ಕೆಳಗಿನ ಸಂಸ್ಥೆಗಳ ನಿರ್ದೇಶಕರು-

(i) ರಾಷ್ಟ್ರೀಯ ದೃಷ್ಟಿದೋಷ ನಿವಾರಣಾ ಸಂಸ್ಥೆ, ಡೆಹರಾಡೂನ್;

(ii) ರಾಷ್ಟ್ರೀಯ ಮಾನಸಿಕ ಅಸ್ವಸ್ಥತೆ ನಿವಾರಣಾ ಸಂಸ್ಥೆ, ಸಿಕಂದರಾಬಾದ್;

(iii) ರಾಷ್ಟ್ರೀಯ ಅಂಗವಿಕಾರ ಚಿಕಿತ್ಸಾ ಸಂಸ್ಥೆ, ಕಲ್ಕತ್ತ;

(iv) ಆಲಿವರ್‌ಜುಂಗ್ ರಾಷ್ಟ್ರೀಯ ಶ್ರವಣ ದೋಷ ನಿವಾರಣಾ ಸಂಸ್ಥೆ, ಮುಂಬೈ;

- ಇವರುಗಳು ಪದನಿಮಿತ್ತ ಸದಸ್ಯರು;

(ಕೆ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯಗಳನ್ನು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಪ್ರತಿನಿಧಿಸಲು ಸರದಿ ಮೂಲಕ ಕೇಂದ್ರ ಸರ್ಕಾರವು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡುವ ನಾಲ್ವರು ಸದಸ್ಯರು:

ಪರಂತು, ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರವಾಗಿ, ಕೇಂದ್ರಾಡಳಿತ ಪ್ರದೇಶದ ಶಿಫಾರಸಿನ ಹೊರತು ಈ ಖಂಡದ ಮೇರೆಗೆ ಯಾವುದೇ ನೇಮಕಾತಿಯನ್ನು ಮಾಡತಕ್ಕದ್ದಲ್ಲ;

(ಎಲ್) ಅಂಗವಿಕಲತೆಗಳಿಗೆ ಸಂಬಂಧಪಟ್ಟಂತೆ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘಗಳನ್ನು ಪ್ರತಿನಿಧಿಸುವುದಕ್ಕಾಗಿ ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಐದು ಜನ ಅಂಗವಿಕಲ ವ್ಯಕ್ತಿಗಳನ್ನು ಸದಸ್ಯರನ್ನಾಗಿ ಕೇಂದ್ರ ಸರ್ಕಾರವು ನಾಮ ನಿರ್ದೇಶನ ಮಾಡಬೇಕು, ಅವರಲ್ಲಿ ಒಬ್ಬೊಬ್ಬರೂ ಒಂದೊಂದು ಅಂಗವಿಕಲ ವರ್ಗಕ್ಕೆ ಸೇರಿದವರಾಗಿರಬೇಕು:

ಪರಂತು, ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ಕೇಂದ್ರ ಸರ್ಕಾರವು ಕನಿಷ್ಠ ಪಕ್ಷ ಒಬ್ಬ ಮಹಿಳೆಯನ್ನು ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಎಂ) ಅಂಗವಿಕಲರ ಕಲ್ಯಾಣ ವ್ಯವಹಾರಗಳನ್ನು ನೋಡಿಕೊಳ್ಳುತ್ತಿರುವ ಭಾರತ ಸರ್ಕಾರದ ಕಲ್ಯಾಣ ಮಂತ್ರಾಲಯದ ಜಂಟಿ ಕಾರ್ಯದರ್ಶಿ, ಪದನಿಮಿತ್ತ ಸದಸ್ಯ-ಕಾರ್ಯದರ್ಶಿ.

(3) ಕೇಂದ್ರ ಸಮನ್ವಯ ಸಮಿತಿಯ ಸದಸ್ಯನು, ಸಂಸತ್ತಿನ ಎರಡು ಸದನಗಳ ಪೈಕಿ ಯಾವುದೇ ಸದನದ ಸದಸ್ಯನಾಗಿ ಆಯ್ಕೆಯಾಗುವುದಕ್ಕಾಗಲಿ ಅಥವಾ ಅಂಥ ಸದಸ್ಯನಾಗಿ ಇರುವುದಕ್ಕಾಗಲಿ ಅಂಥ ಪದಧಾರಣ ಮಾಡಿರುವನೆಂಬ ಕಾರಣದಿಂದ ಅನರ್ಹನಾಗತಕ್ಕದ್ದಲ್ಲ.

**4. ಸದಸ್ಯರ ಪದಾವದಿ.-** (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿರುವಂತೆ ಹೊರತು, 3ನೇ ಪ್ರಕರಣದ (2) ನೇ ಉಪ-ಪ್ರಕರಣದ (ಐ) ಖಂಡ ಅಥವಾ (ಎಲ್) ಖಂಡದ ಮೇರೆಗೆ ಕೇಂದ್ರ ಸಮನ್ವಯ ಸಮಿತಿಗೆ ನಾಮನಿರ್ದೇಶನಗೊಂಡ ಸದಸ್ಯನು ಅವನ ನಾಮನಿರ್ದೇಶನ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

ಪರಂತು, ಅಂಥ ಒಬ್ಬ ಸದಸ್ಯನು, ತನ್ನ ಅವಧಿಯು ಮುಕ್ತಾಯವಾಗಿದ್ದಾಗ್ಯೂ, ತನ್ನ ಉತ್ತರಾಧಿಕಾರಿಯು ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡಿರುವುದು ಮುಂದುವರೆಯತಕ್ಕದ್ದು.

(2) ಒಬ್ಬ ಪದನಿಮಿತ್ತ ಸದಸ್ಯನ ಯಾವ ಪದವನ್ನು ಧಾರಣ ಮಾಡಿದ್ದ ಕಾರಣದಿಂದಾಗಿ ಅವನನ್ನು ನಾಮನಿರ್ದೇಶನ ಮಾಡಲಾಗಿತ್ತೋ ಆ ಪದವನ್ನು ಅವನು ಧಾರಣ ಮಾಡುವುದು ನಿಂತುಹೋದ ಕೂಡಲೇ ಅವನ ಪದಾವಧಿಯು ಕೊನೆಗೊಳ್ಳತಕ್ಕದ್ದು.

(3) ಕೇಂದ್ರ ಸರ್ಕಾರವು, 3ನೇ ಪ್ರಕರಣದ (2) ನೇ ಉಪ-ಪ್ರಕರಣದ (ಐ) ಖಂಡ ಅಥವಾ (ಎಲ್) ಖಂಡದ ಮೇರೆಗೆ ನಾಮ ನಿರ್ದೇಶನಗೊಂಡ ಯಾವನೇ ಸದಸ್ಯನನ್ನು ಪದದಿಂದ ತೆಗೆದುಹಾಕುವುದು ಸೂಕ್ತವೆಂದು ಯೋಚಿಸಿದರೆ ಅವನ ಪದಾವಧಿ ಮುಗಿಯುವುದಕ್ಕೆ ಮುಂಚೆ, ಅವನಿಗೆ ಅದರ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ನೀಡಿದ ನಂತರ ತೆಗೆದು ಹಾಕಬಹುದು.

(4) 3ನೇ ಪ್ರಕರಣದ (2) ನೇ ಉಪ-ಪ್ರಕರಣದ (ಐ) ಖಂಡದ ಅಥವಾ (ಎಲ್) ಖಂಡದ ಮೇರೆಗೆ ನಾಮ ನಿರ್ದೇಶನಗೊಂಡ ಸದಸ್ಯನು ಯಾವುದೇ ಕಾಲದಲ್ಲಿ ತಾನು ಸಹಿ

ಮಾಡಿದ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಸದರಿ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದ್ದು.

(5) ಕೇಂದ್ರ ಸಮನ್ವಯ ಸಮಿತಿಯಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಹೊಸ ನಾಮನಿರ್ದೇಶನದ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಅಂಥ ಖಾಲಿ ಸ್ಥಾನವನ್ನು ಭರ್ತಿ ಮಾಡಲು ನಾಮನಿರ್ದೇಶಿತನಾದ ವ್ಯಕ್ತಿಯು, ಅವನನ್ನು ಯಾರ ಸ್ಥಾನದಲ್ಲಿ ನಾಮನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನ ಪದಾವಧಿಯ ಉಳಿದಿರುವ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

(6) 3ನೇ ಪ್ರಕರಣದ (2) ನೇ ಉಪ-ಪ್ರಕರಣದ (ಐ) ಖಂಡ ಅಥವಾ (ಎಲ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಪುನರ್ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

(7) 3ನೇ ಪ್ರಕರಣದ (2) ನೇ ಉಪ-ಪ್ರಕರಣದ (ಐ) ಖಂಡ ಅಥವಾ (ಎಲ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

**5. ಅನರ್ಹತೆಗಳು.-** (1) (ಎ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯನಿರ್ಣೀತನಾದ ಅಥವಾ ಅವನ ಋಣಗಳ ಸಂದಾಯವನ್ನು ನಿಲಂಬನಗೊಳಿಸಿರುವ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿರುವ, ಅಥವಾ

(ಬಿ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿರುವ, ಅಥವಾ

(ಸಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನೊಳಗೊಂಡ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ, ಅಥವಾ

(ಡಿ) ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ, ಅಥವಾ

(ಇ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಕೇಂದ್ರ ಸಮನ್ವಯ ಸಮಿತಿಯಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟಾಗುವಷ್ಟರ ಮಟ್ಟಿಗೆ ಹಾಗೆ ಸದಸ್ಯನಾಗಿ ಅವನ ಪದವನ್ನು ದುರುಪಯೋಗಪಡಿಸಿಕೊಂಡಿರುವ

- ಯಾರೇ ವ್ಯಕ್ತಿಯು ಕೇಂದ್ರ ಸಮನ್ವಯ ಸಮಿತಿಯ ಸದಸ್ಯನಾಗಿರತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಈ ಪ್ರಕರಣದ ಮೇರೆಗೆ, ಸದಸ್ಯನನ್ನು ತೆಗೆದುಹಾಕುವ ಯಾವುದೇ ಆದೇಶವನ್ನು, ಸಂಬಂಧಪಟ್ಟ ಸದಸ್ಯನಿಗೆ, ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಡದ ಹೊರತು ಮಾಡತಕ್ಕದ್ದಲ್ಲ.

(3) 4ನೇ ಪ್ರಕರಣದ (1) ನೇ ಉಪ-ಪ್ರಕರಣ ಅಥವಾ (6) ನೇ ಉಪ-ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ತೆಗೆದು ಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**6. ಸ್ಥಾನಗಳನ್ನು ಖಾಲಿ ಮಾಡುವುದು.-** ಕೇಂದ್ರ ಸಮನ್ವಯ ಸಮಿತಿಯ ಸದಸ್ಯನು 5 ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**7. ಕೇಂದ್ರ ಸಮನ್ವಯ ಸಮಿತಿಯ ಸಭೆಗಳು.-** ಕೇಂದ್ರ ಸಮನ್ವಯ ಸಮಿತಿಯು ಪ್ರತಿ ಆರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಕೇಂದ್ರ ಸರ್ಕಾರ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**8. ಕೇಂದ್ರ ಸಮನ್ವಯ ಸಮಿತಿಯ ಪ್ರಕಾರ್ಯಗಳು.-**(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸಮನ್ವಯ ಸಮಿತಿಯು, ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಷ್ಟ್ರೀಯ ಮಾರ್ಗದರ್ಶನ ಕೇಂದ್ರವಾಗಿ ಸೇವೆ ಸಲ್ಲಿಸತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ ಸಮಗ್ರ ಕಾರ್ಯನೀತಿಯು ನಿರಂತರವಾಗಿ ಮುಂದುವರಿಯುವುದಕ್ಕೆ ಅವಕಾಶಗಳನ್ನು ಒದಗಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಕೇಂದ್ರ ಸಮನ್ವಯ ಸಮಿತಿಯು ಈ ಕೆಳಕಂಡ ಎಲ್ಲ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು, ಅವುಗಳೆಂದರೆ:-

(ಎ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವಂಥ ಎಲ್ಲ ಸರ್ಕಾರಿ ಇಲಾಖೆಗಳ ಮತ್ತು ಇತರೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು;

(ಬಿ) ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಒಂದು ರಾಷ್ಟ್ರೀಯ ಕಾರ್ಯನೀತಿಯನ್ನು ರೂಪಿಸುವುದು;

(ಸಿ) ಅಂಗವಿಕಲತೆಗೆ ಸಂಬಂಧಪಟ್ಟ ಕಾರ್ಯನೀತಿಗಳು, ಕಾರ್ಯಕ್ರಮಗಳು, ಶಾಸನ ರಚನೆ ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು;

(ಡಿ) ರಾಷ್ಟ್ರೀಯ ಯೋಜನೆಗಳಲ್ಲಿ ಮತ್ತು ಅಂತರರಾಷ್ಟ್ರೀಯ ಏಜೆನ್ಸಿಗಳು ರೂಪಿಸಿರುವ ಇತರ ಕಾರ್ಯಕ್ರಮಗಳಲ್ಲಿ ಮತ್ತು ಕಾರ್ಯನೀತಿಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಯೋಜನೆಗಳನ್ನು ಮತ್ತು ಪ್ರೊಜೆಕ್ಟುಗಳನ್ನು ಕಲ್ಪಿಸುವ ಉದ್ದೇಶದಿಂದ ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಮತ್ತು ಅಂತರ ರಾಷ್ಟ್ರೀಯ ಸಂಸ್ಥೆಗಳೊಂದಿಗೆ ಅಂಗವಿಕಲ ವ್ಯಕ್ತಿಗಳ ಸಮಸ್ಯೆಗಳನ್ನು ಪರಿಹರಿಸಲು ಕ್ರಮ ಕೈಗೊಳ್ಳುವುದು;

(ಇ) ಅಂಗವಿಕಲ ವ್ಯಕ್ತಿಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಣಿಗೆದಾರ ಏಜೆನ್ಸಿಗಳೊಂದಿಗೆ ಅವರು ನಿಧಿ ಒದಗಿಸುವ ನೀತಿಯ ಬಗ್ಗೆ ಸಮಾಲೋಚಿಸಿ ಪರಾಮರ್ಶಿಸುವುದು;

(ಎಫ್) ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ, ಜನೋಪಯೋಗಿ ಸ್ಥಳಗಳಲ್ಲಿ, ಶಾಲೆಗಳಲ್ಲಿ ಮತ್ತು ಇತರೆ ಸಂಸ್ಥೆಗಳಲ್ಲಿ ಅಡೆತಡೆಯಿಲ್ಲದ ಮುಕ್ತ ವಾತಾವರಣವನ್ನು ದೊರಕಿಸಿಕೊಡುವುದಕ್ಕೆ ಸೂಕ್ತವೆಂದು ಭಾವಿಸುವಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದು;

(ಜಿ) ಅಂಗವಿಕಲ ವ್ಯಕ್ತಿಗಳಿಗೆ ಸಮಾನತೆಯನ್ನು ಮತ್ತು ಪೂರ್ಣ ಭಾಗವಹಿಸುವಿಕೆಯನ್ನು ದೊರಕಿಸಿಕೊಡುವುದಕ್ಕೆ ಸಂಬಂಧಪಟ್ಟಂತೆ ರೂಪಿಸಲಾದ ಕಾರ್ಯನೀತಿಗಳ ಮತ್ತು ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಮತ್ತು ಮೌಲ್ಯ ಮಾಪನ ಮಾಡುವುದು;

(ಹೆಚ್) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂತಹ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**9. ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ.**–(1) ಈ ಅಧಿನಿಯಮದ ಮೇರೆಗೆ ವಹಿಸಿಕೊಡುವ ಕಾರ್ಯಗಳನ್ನು ನೆರವೇರಿಸುವುದಕ್ಕೆ ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ ಎಂದು ಕರೆಯುವ ಒಂದು ಸಮಿತಿಯನ್ನು ಕೇಂದ್ರ ಸರ್ಕಾರವು ರಚಿಸತಕ್ಕದ್ದು.

(2) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು,–

(ಎ) ಭಾರತ ಸರ್ಕಾರದ ಕಲ್ಯಾಣ ಮಂತ್ರಾಲಯದ ಕಾರ್ಯದರ್ಶಿ–ಪದನಿಮಿತ್ತ ಅಧ್ಯಕ್ಷ;

(ಬಿ) ಮುಖ್ಯ ಕಮಿಷನರು, ಪದನಿಮಿತ್ತ ಸದಸ್ಯ;

(ಸಿ) ಆರೋಗ್ಯ ಸೇವೆಗಳ ಮಹಾ – ನಿರ್ದೇಶಕ, ಪದನಿಮಿತ್ತ ಸದಸ್ಯ;

(ಡಿ) ಉದ್ಯೋಗ ಮತ್ತು ತರಬೇತಿಯ ಮಹಾ ನಿರ್ದೇಶಕ, ಪದನಿಮಿತ್ತ ಸದಸ್ಯ;

(ಇ) ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಕಲ್ಯಾಣ, ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳು ಮತ್ತು ವಿಶ್ರಾಂತಿ ವೇತನ ಮತ್ತು ನಗರ ವ್ಯವಹಾರಗಳು ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ,– ಈ ಮಂತ್ರಾಲಯಗಳನ್ನು ಅಥವಾ ಇಲಾಖೆಗಳನ್ನು ಪ್ರತಿನಿಧಿಸಲು ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಆರು ವ್ಯಕ್ತಿಗಳು, ಪದನಿಮಿತ್ತ ಸದಸ್ಯರು;

(ಎಫ್) ಹಣಕಾಸು ಸಲಹೆಗಾರ, ಕೇಂದ್ರ ಸರ್ಕಾರದ ಕಲ್ಯಾಣ ಮಂತ್ರಾಲಯ, ಪದನಿಮಿತ್ತ ಸದಸ್ಯ;

(ಜಿ) ಸಲಹೆಗಾರ (ಟ್ಯಾರಿಫ್), ರೈಲ್ವೆ ಮಂಡಳಿ, ಪದನಿಮಿತ್ತ ಸದಸ್ಯ;

(ಹೆಚ್) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ರಾಜ್ಯಗಳನ್ನು ಮತ್ತು ಒಕ್ಕೂಟ ರಾಜ್ಯ ಕ್ಷೇತ್ರಗಳನ್ನು ಪ್ರತಿನಿಧಿಸುವುದಕ್ಕಾಗಿ, ಸರದಿ ಮೂಲಕ, ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ನಾಲ್ಕು ಸದಸ್ಯರು;

(ಐ) ಕೇಂದ್ರ ಸರ್ಕಾರವು ನಾಮನಿರ್ದೇಶಿಸಲು ಸೂಕ್ತವೆಂದು ಭಾವಿಸಬಹುದಾದಂಥ ಅಂಗವಿಕಲರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಒಬ್ಬ ವ್ಯಕ್ತಿ,– ಸದಸ್ಯ;

(ಜೆ) ಅಂಗವಿಕಲರಿಗೆ ಸಂಬಂಧಿಸಿರುವಂಥ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘಗಳನ್ನು ಪ್ರತಿನಿಧಿಸಲು ಅಂಗವಿಕಲತೆಯ ಪ್ರತಿಯೊಂದು ವರ್ಗದಿಂದ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವಂಥ ಮತ್ತು ಸಾಧ್ಯವಿರುವಷ್ಟು ಮಟ್ಟಿಗೆ, ಅಂಗವಿಕಲರಾಗಿರುವಂಥ ಐದು ಜನ,–ಸದಸ್ಯರು:

ಪರಂತು, ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ಕೇಂದ್ರ ಸರ್ಕಾರವು ಕೊನೇ ಪಕ್ಷ ಒಬ್ಬ ಮಹಿಳೆಯನ್ನು ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಕೆ) ಅಂಗವಿಕಲರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ವ್ಯವಹಾರಗಳನ್ನು ನೋಡಿಕೊಳ್ಳುವ ಕಲ್ಯಾಣ ಮಂತ್ರಾಲಯದಲ್ಲಿನ ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ,– ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(3) (2) ನೇ ಉಪ-ಪ್ರಕರಣದ (ಐ) ಖಂಡದ ಮತ್ತು (ಜೆ) ಖಂಡದ ಮೇರೆಗೆ ನಾಮ ನಿರ್ದೇಶಿತರಾದ ಸದಸ್ಯರು ಕೇಂದ್ರ ಸರ್ಕಾರವು ಗೊತ್ತುಪಡಿಸುವಂಥ ಭತ್ಯಗಳನ್ನು ಪಡೆಯತಕ್ಕದ್ದು.

(4) (2) ನೇ ಉಪ-ಪ್ರಕರಣದ (ಐ) ಖಂಡ ಅಥವಾ (ಜೆ) ಖಂಡದ ಮೇರೆಗೆ ನಾಮ ನಿರ್ದೇಶನಗೊಂಡ ಸದಸ್ಯನು ತಾನು ಸಹಿಮಾಡಿದ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಆ ತರುವಾಯ ಸದರಿ ಸದಸ್ಯನ ಸ್ಥಾನವು ಖಾಲಿಯಾಗತಕ್ಕದ್ದು.

**10. ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಯ ಕಾರ್ಯಗಳು.-** (1) ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ಕೇಂದ್ರ ಸಮನ್ವಯ ಸಮಿತಿಯ ಕಾರ್ಯನಿರ್ವಾಹಕ ಮಂಡಲಿಯಾಗಿರತಕ್ಕದ್ದು ಮತ್ತು ಕೇಂದ್ರ ಸಮನ್ವಯ ಸಮಿತಿಯ ನಿರ್ಣಯಗಳನ್ನು ಜಾರಿಗೊಳಿಸುವ ಜವಾಬ್ದಾರಿ ಹೊಂದಿರತಕ್ಕದ್ದು.

(2) ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಯು (1) ನೇ ಉಪ-ಪ್ರಕರಣದ ಉಪಬಂಧಗಳಿಗೆ ಬಾಧಕವಾಗದ ರೀತಿಯಲ್ಲಿ, ಕೇಂದ್ರ ಸಮನ್ವಯ ಸಮಿತಿಯು ತನಗೆ ವಹಿಸಿಕೊಡಬಹುದಾದಂಥ ಇತರೆ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**11. ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಭೆಗಳು.-** ಕೇಂದ್ರ ಕಾರ್ಯನಿರ್ವಾಹಕ ಸಮಿತಿಯು ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ನಡೆದಂಥ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**12. ನಿರ್ದಿಷ್ಟ ಉದ್ದೇಶಕ್ಕಾಗಿ ಕೇಂದ್ರ ಕಾರ್ಯನಿರ್ವಾಹಕ ಸಮಿತಿಗೆ ಜನರ ತಾತ್ಕಾಲಿಕ ಸಹ ಸದಸ್ಯತ್ವ.-**(1) ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಯು, ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ತನ್ನ ಯಾವುದೇ ಕಾರ್ಯಗಳನ್ನು ನಿರ್ವಹಿಸುವಲ್ಲಿ ಯಾವನೇ ವ್ಯಕ್ತಿಯ ಸಹಾಯ ಅಥವಾ ಸಲಹೆ ಪಡೆಯಲು ಇಚ್ಛಿಸಿದರೆ, ಅಂಥ ವ್ಯಕ್ತಿಯನ್ನು ಸಹ ಸದಸ್ಯನಾಗಿ ಸೇರಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕಾಗಿ (1) ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯೊಂದಿಗೆ ಸಹ ಸದಸ್ಯನಾದ ವ್ಯಕ್ತಿಗೆ, ಆ ಉದ್ದೇಶಕ್ಕೆ ಸಂಬಂಧಿಸಿದ ಕೇಂದ್ರ ಕಾರ್ಯನಿರ್ವಾಹಕ ಸಮಿತಿಯ ಸಭೆಯ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕು ಇರತಕ್ಕದ್ದು, ಆದರೆ ಸದರಿ ಸಮಿತಿಯ ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಇರತಕ್ಕದ್ದಲ್ಲ ಮತ್ತು ಇತರ ಯಾವುದೇ ಉದ್ದೇಶಕ್ಕಾಗಿ ಅವನು ಸಮಿತಿಯ ಸದಸ್ಯನಾಗಿ ಇರತಕ್ಕದ್ದಲ್ಲ.

(3) ಯಾವುದೇ ಉದ್ದೇಶಕ್ಕಾಗಿ (1) ನೇ ಉಪ-ಪ್ರಕರಣದ ಮೇರೆಗೆ ಸದರಿ ಸಮಿತಿಯ ಸಹ ಸದಸ್ಯನಾಗಿರುವ ವ್ಯಕ್ತಿಗೆ ಸದರಿ ಸಮಿತಿಯ ಸಭೆಗಳಿಗೆ ಹಾಜರಾಗಿದ್ದಕ್ಕಾಗಿ ಮತ್ತು ಅದರ ಯಾವುದೇ ಇತರ ಕೆಲಸದಲ್ಲಿ ಭಾಗವಹಿಸಿದ್ದಕ್ಕಾಗಿ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಂಥ ಫೀಜು ಮತ್ತು ಭತ್ಯಗಳನ್ನು ಸಂದಾಯ ಮಾಡತಕ್ಕದ್ದು.

## ಅಧ್ಯಾಯ - III

## ರಾಜ್ಯ ಸಮನ್ವಯ ಸಮಿತಿ

**13. ರಾಜ್ಯ ಸಮನ್ವಯ ಸಮಿತಿ.-** (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು, ಮತ್ತು ವಹಿಸಿಕೊಟ್ಟ ಪ್ರಕಾರ್ಯವನ್ನು ನಿರ್ವಹಿಸಲು ರಾಜ್ಯ ಸಮನ್ವಯ ಸಮಿತಿ ಎಂದು ಕರೆಯುವ ಒಂದು ಮಂಡಲಿಯನ್ನು ರಚಿಸತಕ್ಕದ್ದು.

(2) ರಾಜ್ಯ ಸಮನ್ವಯ ಸಮಿತಿಯಲ್ಲಿ ಕೆಳಕಂಡವರು ಇರತಕ್ಕದ್ದು:-

(ಎ) ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿ, ಪದನಿಮಿತ್ತ ಅಧ್ಯಕ್ಷ;

(ಬಿ) ಸಮಾಜ ಕಲ್ಯಾಣ ಇಲಾಖೆಯ ರಾಜ್ಯ ಮಂತ್ರಿ, ಯಾರಾದರೂ ಇದ್ದರೆ, ಪದನಿಮಿತ್ತ ಉಪಾಧ್ಯಕ್ಷ;

(ಸಿ) ಕಲ್ಯಾಣ, ಶಿಕ್ಷಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ವೆಚ್ಚ, ಸಿಬ್ಬಂದಿ ತರಬೇತಿ ಮತ್ತು ಸಾರ್ವಜನಿಕ ಕುಂದು ಕೊರತೆ, ಆರೋಗ್ಯ, ಗ್ರಾಮೀಣ ಅಭಿವೃದ್ಧಿ, ಕೈಗಾರಿಕಾ ಅಭಿವೃದ್ಧಿ, ನಗರ ವ್ಯವಹಾರ ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ, ಸಾರ್ವಜನಿಕ ಉದ್ಯಮ, ಯಾವುದೇ ಹೆಸರಿನಿಂದ ಕರೆದಿರಲಿ, ಈ ಇಲಾಖೆಗಳ ರಾಜ್ಯ ಸರ್ಕಾರದ ಕಾರ್ಯದರ್ಶಿಗಳು, ಪದನಿಮಿತ್ತ ಸದಸ್ಯರು;

(ಡಿ) ರಾಜ್ಯ ಸರ್ಕಾರವು ಅವಶ್ಯವೆಂದು ಭಾವಿಸುವಂತಹ ಯಾವುದೇ ಇತರ ಇಲಾಖೆಯ ಕಾರ್ಯದರ್ಶಿ, ಪದನಿಮಿತ್ತ ಸದಸ್ಯ;

(ಇ) ಸಾರ್ವಜನಿಕ ಉದ್ದಿಮೆಗಳ (ಯಾವುದೇ ಹೆಸರಿನಿಂದ ಕರೆದಿರಲಿ) ಅಧ್ಯಕ್ಷ, ಪದನಿಮಿತ್ತ ಸದಸ್ಯರು;

(ಎಫ್) ಅಂಗವಿಕಲರಿಗೆ ಸಂಬಂಧಿಸಿರುವಂಥ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘಗಳನ್ನು ಪ್ರತಿನಿಧಿಸಲು ಅಂಗವಿಕಲತೆಯ ಪ್ರತಿಯೊಂದು ವರ್ಗದಿಂದ ರಾಜ್ಯ ಸರ್ಕಾರವು ನಾಮ ನಿರ್ದೇಶನ ಮಾಡುವಂಥ, ಮತ್ತು ಸಾಧ್ಯವಿರುವಷ್ಟು ಮಟ್ಟಿಗೆ ಅಂಗವಿಕಲರಾಗಿರುವ ಐದು ಜನ,- ಸದಸ್ಯರು:

ಪರಂತು, ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ರಾಜ್ಯ ಸರ್ಕಾರವು ಕೊನೇ ಪಕ್ಷ ಒಬ್ಬ ಮಹಿಳೆಯನ್ನು ಮತ್ತು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಜೆ) ರಾಜ್ಯ ವಿಧಾನ ಮಂಡಲದಿಂದ ಮೂವರು ಸದಸ್ಯರು, ಅವರಲ್ಲಿ ವಿಧಾನ ಸಭೆಗೆ ಆಯ್ಕೆಯಾದ ಇಬ್ಬರು ಮತ್ತು ವಿಧಾನ ಪರಿಷತ್ ಇದ್ದಲ್ಲಿ ಅದರಿಂದ ಯಾರೇ ಒಬ್ಬರು;

(ಹೆಚ್) ರಾಜ್ಯ ಸರ್ಕಾರವು ಕೃಷಿ, ಕೈಗಾರಿಕೆ ಅಥವಾ ವ್ಯಾಪಾರ ಅಥವಾ ಇತರೆ ಯಾವುದೇ ಹಿತಾಸಕ್ತಿಗಳನ್ನು ಪ್ರತಿನಿಧಿಸಬೇಕೆಂದು ಅಭಿಪ್ರಾಯಪಟ್ಟಲ್ಲಿ, ಹಾಗೆ ಪ್ರತಿನಿಧಿಸುವುದಕ್ಕಾಗಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವ ಮೂವರು ವ್ಯಕ್ತಿಗಳು, ಪದನಿಮಿತ್ತ ಸದಸ್ಯರು;

(ಐ) ಕಮಿಷನರು,- ಪದನಿಮಿತ್ತ ಸದಸ್ಯರು;

(ಜೆ) ಅಂಗವಿಕಲರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ವ್ಯವಹಾರಗಳನ್ನು ನೋಡಿಕೊಳ್ಳುವ ರಾಜ್ಯ ಸರ್ಕಾರದ ಕಾರ್ಯದರ್ಶಿ,- ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(3) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಒಕ್ಕೂಟ ರಾಜ್ಯ ಕ್ಷೇತ್ರಕ್ಕೆ ಯಾವುದೇ ರಾಜ್ಯ ಸಮನ್ವಯ ಸಮಿತಿಯನ್ನು ರಚಿಸತಕ್ಕದ್ದಲ್ಲ ಮತ್ತು ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ ಕೇಂದ್ರ ಸಮನ್ವಯ ಸಮಿತಿಯು ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಹಾಗೆಯೇ ಒಕ್ಕೂಟ ರಾಜ್ಯ ಕ್ಷೇತ್ರಕ್ಕಾಗಿ ಒಂದು ರಾಜ್ಯ ಸಮನ್ವಯ ಸಮಿತಿಯು ನಿರ್ವಹಿಸುವಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ಒಂದು ಒಕ್ಕೂಟ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ, ಕೇಂದ್ರ ಸಮನ್ವಯ ಸಮಿತಿಯು ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳ ಮಂಡಲಿಗೆ ಈ ಉಪ-ಪ್ರಕರಣದ ಮೇರೆಗಿನ ತನ್ನ ಎಲ್ಲ ಅಥವಾ ಯಾವುದೇ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ವಹಿಸಿಕೊಡಬಹುದು.

**14. ಸದಸ್ಯರ ಸೇವೆಯ ನಿಬಂಧನೆಗಳು ಮತ್ತು ಷರತ್ತುಗಳು.-** (1) ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, 13ನೇ ಪ್ರಕರಣದ (2) ನೇ ಉಪ-ಪ್ರಕರಣದ (ಎಫ್) ಖಂಡ ಅಥವಾ (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ರಾಜ್ಯ ಸಮನ್ವಯ ಸಮಿತಿಯ ಸದಸ್ಯನು ನಾಮನಿರ್ದೇಶನಗೊಂಡ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ತನ್ನ ಪದವನ್ನು ಧಾರಣ ಮಾಡಿರತಕ್ಕದ್ದು:

ಪರಂತು, ಅಂಥ ಸದಸ್ಯನ ಪದಾವಧಿ ಮುಕ್ತಾಯಗೊಂಡಿದ್ದರೂ ಸಹ, ಅವನ ಸ್ಥಾನಕ್ಕೆ ಉತ್ತರಾಧಿಕಾರಿಯು ಬರುವವರೆಗೂ ಅವನು ಪದದಲ್ಲಿ ಮುಂದುವರೆಯತಕ್ಕದ್ದು.

(2) ಪದನಿಮಿತ್ತ ಸದಸ್ಯನು, ಯಾವ ಪದದಲ್ಲಿರುವುದರಿಂದ ಹಾಗೆ ನಾಮನಿರ್ದೇಶನಗೊಂಡಿದ್ದನೋ ಅಂಥ ಪದದಲ್ಲಿರುವುದು ನಿಂತು ಹೋದ ಕೂಡಲೇ ಅವನ ಪದಾವಧಿಯು ಸಹ ನಿಂತುಹೋಗತಕ್ಕದ್ದು.

(3) ರಾಜ್ಯ ಸರ್ಕಾರವು, 13ನೇ ಪ್ರಕರಣದ (2) ನೇ ಉಪ-ಪ್ರಕರಣದ (ಎಫ್) ಖಂಡ ಅಥವಾ (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಯಾವನೇ ಸದಸ್ಯನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆಯೇ ತಾನು ವಿಹಿತವೆಂದು ಭಾವಿಸಿದರೆ, ಆ ಸದಸ್ಯನನ್ನು ತೆಗೆದು ಹಾಕುವುದಕ್ಕೆ ಸಂಬಂಧಪಟ್ಟಂತೆ ಕಾರಣ ತೋರಿಸಲು ಅವನಿಗೆ ಸೂಕ್ತ ಅವಕಾಶವನ್ನು ಕೊಟ್ಟ ನಂತರ ಅವನನ್ನು ತೆಗೆದುಹಾಕಬಹುದು.

(4) 13ನೇ ಪ್ರಕರಣದ (2) ನೇ ಉಪ-ಪ್ರಕರಣದ (ಎಫ್) ಖಂಡದ ಅಥವಾ (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು, ಯಾವುದೇ ಕಾಲದಲ್ಲಿ, ತಾನು ಸಹಿ ಮಾಡಿದ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಸದರಿ ಸದಸ್ಯನ ಸ್ಥಾನವು ಅನಂತರ ಖಾಲಿಯಾಗತಕ್ಕದ್ದು.

(5) ರಾಜ್ಯ ಸಮನ್ವಯ ಸಮಿತಿಯಲ್ಲಿ ಉಂಟಾಗುವ ಆಕಸ್ಮಿಕ ಖಾಲಿ ಸ್ಥಾನವನ್ನು ಹೊಸ ನಾಮನಿರ್ದೇಶನ ಮಾಡುವ ಮೂಲಕವೇ ಭರ್ತಿಮಾಡತಕ್ಕದ್ದು ಮತ್ತು ಅಂಥ ಖಾಲಿ ಸ್ಥಾನವನ್ನು ಭರ್ತಿಮಾಡುವುದಕ್ಕೆ ನಾಮನಿರ್ದೇಶನಗೊಂಡ ವ್ಯಕ್ತಿಯು ಯಾವ ಸದಸ್ಯನ ಖಾಲಿ ಸ್ಥಾನದಲ್ಲಿ ನಾಮನಿರ್ದೇಶಿತನಾಗುವನೋ ಅವನ ಪದಾವಧಿಯ ಉಳಿದ ಅವಧಿಯವರೆಗೆ ಮುಂದುವರಿಯತಕ್ಕದ್ದು.

(6) 13 ನೇ ಪ್ರಕರಣದ (2) ನೇ ಉಪ-ಪ್ರಕರಣದ (ಎಫ್) ಖಂಡ ಮತ್ತು (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ಪುನರ್ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

(7) 13 ನೇ ಪ್ರಕರಣದ (2) ನೇ ಉಪ-ಪ್ರಕರಣದ (ಎಫ್) ಖಂಡ ಮತ್ತು (ಹೆಚ್) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಭತ್ಯಗಳನ್ನು ಪಡೆಯತಕ್ಕದ್ದು.

**15. ಅನರ್ಹತೆಗಳು.-** (1)(ಎ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯ ನಿರ್ಣೀತನಾದ ಅಥವಾ ಅವನ ಋಣಗಳ ಸಂದಾಯವನ್ನು ನಿಲಂಬನಗೊಳಿಸಿರುವ ಅಥವಾ ಅವನಿಗೆ ಸಾಲ ಕೊಟ್ಟವರೊಂದಿಗೆ ರಾಜಿ ಮಾಡಿ ಕೊಂಡಿರುವ; ಅಥವಾ

(ಬಿ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿರುವ; ಅಥವಾ

(ಸಿ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಒಂದು ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ; ಅಥವಾ

(ಡಿ) ಯಾವುದೇ ಕಾಲದಲ್ಲಿ ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿರುವ; ಅಥವಾ

(ಇ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ರಾಜ್ಯ ಸಮನ್ವಯ ಸಮಿತಿಯಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ ಸದಸ್ಯನಾಗಿ ತನ್ನ ಪದವನ್ನು ದುರುಪಯೋಗಪಡಿಸಿಕೊಂಡಿರುವ

- ಯಾವನೇ ವ್ಯಕ್ತಿಯು ರಾಜ್ಯ ಸಮನ್ವಯ ಸಮಿತಿಯ ಸದಸ್ಯನಾಗಿರತಕ್ಕದ್ದಲ್ಲ.

(2) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ಸದಸ್ಯನನ್ನು ತೆಗೆದು ಹಾಕುವ ಯಾವುದೇ ಆದೇಶವನ್ನು ಸಂಬಂಧಪಟ್ಟ ಸದಸ್ಯನಿಗೆ, ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶ ಕೊಡದ ಹೊರತು ಮಾಡತಕ್ಕದ್ದಲ್ಲ.

(3) 14 ನೇ ಪ್ರಕರಣದ (1) ನೇ ಉಪ-ಪ್ರಕರಣದ ಅಥವಾ (6) ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದಲ್ಲ.

**16. ಸ್ಥಾನಗಳನ್ನು ಖಾಲಿ ಮಾಡುವುದು.-** ರಾಜ್ಯ ಸಮನ್ವಯ ಸಮಿತಿಯ ಸದಸ್ಯನು 15 ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗೊಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕದ್ದು.

**17. ರಾಜ್ಯ ಸಮನ್ವಯ ಸಮಿತಿಯ ಸಭೆಗಳು.-** ರಾಜ್ಯ ಸಮನ್ವಯ ಸಮಿತಿಯು ಪ್ರತಿ ಆರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಸಲ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿ ಕಾರ್ಯಕಲಾಪಗಳನ್ನು ನಡೆಸುವ ಸಂಬಂಧದಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**18. ರಾಜ್ಯ ಸಮನ್ವಯ ಸಮಿತಿಯ ಪ್ರಕಾರ್ಯಗಳು.-** (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ರಾಜ್ಯ ಸಮನ್ವಯ ಸಮಿತಿಯು ಅಂಗವಿಕಲರಿಗೆ ಸಂಬಂಧಿಸಿದ ವಿಷಯಗಳಲ್ಲಿ ರಾಜ್ಯ ಮಟ್ಟದ ಮಾರ್ಗದರ್ಶನ ಕೇಂದ್ರವಾಗಿ ಸೇವೆ ಸಲ್ಲಿಸತಕ್ಕದ್ದು ಮತ್ತು ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ದಿಶೆಯಲ್ಲಿ ಸಮಗ್ರ ಕಾರ್ಯನೀತಿಯ ನಿರಂತರವಾಗಿ ಮುಂದುವರಿಯುವುದಕ್ಕೆ ಅವಕಾಶಗಳನ್ನು ಒದಗಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ರಾಜ್ಯ ಸಮನ್ವಯ ಸಮಿತಿಯು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಬಹುದು, ಅವುಗಳೆಂದರೆ,-

(ಎ) ಅಂಗವಿಕಲ ವ್ಯಕ್ತಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹರಿಸುವಂಥ ಎಲ್ಲ ಸರ್ಕಾರಿ ಇಲಾಖೆಗಳ ಮತ್ತು ಇತರೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಚಟುವಟಿಕೆಗಳನ್ನು ಪರಾಮರ್ಶಿಸುವುದು ಮತ್ತು ಸಮನ್ವಯಗೊಳಿಸುವುದು;

(ಬಿ) ಅಂಗವಿಕಲ ವ್ಯಕ್ತಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಒಂದು ರಾಜ್ಯ ಕಾರ್ಯನೀತಿಯನ್ನು ರೂಪಿಸುವುದು;

(ಸಿ) ಅಂಗವಿಕಲತೆಗೆ ಸಂಬಂಧಪಟ್ಟ ಕಾರ್ಯನೀತಿಗಳು, ಕಾರ್ಯಕ್ರಮಗಳು, ಶಾಸನ ರಚನೆ, ಮತ್ತು ಯೋಜನೆಗಳನ್ನು ರೂಪಿಸುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಡಿ) ಅಂಗವಿಕಲ ವ್ಯಕ್ತಿಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ದೇಣಿಗೆದಾರ ಏಜನ್ಸಿಗಳೊಂದಿಗೆ ಅವರು ನಿಧಿ ಒದಗಿಸುವ ನೀತಿಯ ಬಗ್ಗೆ ಸಮಾಲೋಚಿಸಿ ಪರಾಮರ್ಶಿಸುವುದು;

(ಇ) ಸಾರ್ವಜನಿಕ ಸ್ಥಳಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ, ಜನೋಪಯೋಗಿ ಸ್ಥಳಗಳಲ್ಲಿ, ಶಾಲೆಗಳಲ್ಲಿ ಮತ್ತು ಇತರೆ ಸಂಸ್ಥೆಗಳಲ್ಲಿ ಅಡೆತಡೆಯಿಲ್ಲದ ಮುಕ್ತ ವಾತಾವರಣ ದೊರಕಿಸಿಕೊಡುವುದಕ್ಕೆ ಸೂಕ್ತವೆಂದು ಭಾವಿಸುವಂಥ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದು;

(ಎಫ್) ಅಂಗವಿಕಲ ವ್ಯಕ್ತಿಗಳಿಗೆ ಸಮಾನತೆಯನ್ನು ಮತ್ತು ಪೂರ್ಣ ಭಾಗವಹಿಸುವಿಕೆಯನ್ನು ದೊರಕಿಸಿಕೊಡುವುದಕ್ಕೆ ಸಂಬಂಧಪಟ್ಟಂತೆ ರೂಪಿಸಲಾದ ಕಾರ್ಯನೀತಿಗಳ ಮತ್ತು ಕಾರ್ಯಕ್ರಮಗಳ ಪರಿಣಾಮವನ್ನು ಪರಿಶೀಲಿಸುವುದು ಮತ್ತು ಮೌಲ್ಯಮಾಪನ ಮಾಡುವುದು;

(ಜಿ) ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂತಹ ಇತರೆ ಕಾರ್ಯಗಳನ್ನು ನಿರ್ವಹಿಸುವುದು.

**19. ರಾಜ್ಯ ಕಾರ್ಯ ನಿರ್ವಾಹಕ ಸಮಿತಿ.-** (1) ಈ ಅಧಿನಿಯಮದ ಮೇರೆಗೆ ವಹಿಸಿಕೊಡುವ ಕಾರ್ಯಗಳನ್ನು ನೆರವೇರಿಸುವುದಕ್ಕೆ ರಾಜ್ಯ ಕಾರ್ಯ ನಿರ್ವಾಹಕ ಸಮಿತಿ ಎಂದು ಕರೆಯುವ ಒಂದು ಸಮಿತಿಯನ್ನು ರಾಜ್ಯ ಸರ್ಕಾರವು ರಚಿಸತಕ್ಕದ್ದು.

(2) ರಾಜ್ಯ ಕಾರ್ಯ ನಿರ್ವಾಹಕ ಸಮಿತಿಯು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು,-

(ಎ) ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ,- ಪದನಿಮಿತ್ತ ಅಧ್ಯಕ್ಷ;

(ಬಿ) ಕಮಿಷನರು,- ಪದನಿಮಿತ್ತ ಸದಸ್ಯ;

(ಸಿ) ಆರೋಗ್ಯ, ಹಣಕಾಸು, ಗ್ರಾಮೀಣ ಅಭಿವೃದ್ಧಿ, ಶಿಕ್ಷಣ, ಕಲ್ಯಾಣ, ಸಿಬ್ಬಂದಿ ತರಬೇತಿ ಮತ್ತು ಸಾರ್ವಜನಿಕ ಕುಂದುಕೊರತೆಗಳು, ನಗರಾಭಿವೃದ್ಧಿ, ಕಾರ್ಮಿಕ ಮತ್ತು ಉದ್ಯೋಗ, ವಿಜ್ಞಾನ ಮತ್ತು ತಂತ್ರಜ್ಞಾನ - ಈ ಇಲಾಖೆಗಳನ್ನು ಪ್ರತಿನಿಧಿಸುವುದಕ್ಕಾಗಿ ರಾಜ್ಯ ಸರ್ಕಾರದ ಜಂಟಿ ಕಾರ್ಯದರ್ಶಿಯ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಒಂಭತ್ತು ವ್ಯಕ್ತಿಗಳು, ಪದನಿಮಿತ್ತ ಸದಸ್ಯರು;

(ಡಿ) ಅಂಗವಿಕಲರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸುವಂತೆ ನಾಮನಿರ್ದೇಶನ ಮಾಡುವ ಒಬ್ಬ ವ್ಯಕ್ತಿ,- ಸದಸ್ಯ;

(ಇ) ಅಂಗವಿಕಲರಿಗೆ ಸಂಬಂಧಿಸಿರುವಂಥ ಸರ್ಕಾರೇತರ ಸಂಸ್ಥೆಗಳನ್ನು ಅಥವಾ ಸಂಘಗಳನ್ನು ಪ್ರತಿನಿಧಿಸಲು ಅಂಗವಿಕಲತೆಯ ಪ್ರತಿಯೊಂದು ವರ್ಗದಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡುವಂಥ ಮತ್ತು ಸಾಧ್ಯವಿರುವಷ್ಟು ಮಟ್ಟಿಗೆ ಅಂಗವಿಕಲರಾಗಿರುವಂಥ, ಐದು ಜನರು:

ಪರಂತು, ಈ ಖಂಡದ ಮೇರೆಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡುವಾಗ, ರಾಜ್ಯ ಸರ್ಕಾರವು ಕೊನೇ ಪಕ್ಷ ಒಬ್ಬ ಮಹಿಳೆಯನ್ನು ಮತ್ತು ಪರಿಶಿಷ್ಟ ಜಾತಿಗೆ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು;

(ಎಫ್) ಅಂಗವಿಕಲರ ಕ್ಷೇಮಾಭಿವೃದ್ಧಿಗೆ ಸಂಬಂಧಿಸಿದ ವ್ಯವಹಾರಗಳನ್ನು ನೋಡಿಕೊಳ್ಳುವ ಕಲ್ಯಾಣ ಇಲಾಖೆಯ ಜಂಟಿ ಕಾರ್ಯದರ್ಶಿ,- ಪದನಿಮಿತ್ತ ಸದಸ್ಯ ಕಾರ್ಯದರ್ಶಿ.

(3) (2)ನೇ ಉಪಪ್ರಕರಣದ (ಡಿ) ಖಂಡದ ಮತ್ತು (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯರು ರಾಜ್ಯ ಸರ್ಕಾರವು ಗೊತ್ತುಪಡಿಸುವಂಥ ಭತ್ಯಗಳನ್ನು ಪಡೆಯತಕ್ಕದ್ದು.

(4) (ಡಿ) ಖಂಡದ ಅಥವಾ (ಇ) ಖಂಡದ ಮೇರೆಗೆ ನಾಮನಿರ್ದೇಶನಗೊಂಡ ಸದಸ್ಯನು ತಾನು ಸಹಿಮಾಡಿದ ಪತ್ರವನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸುವ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಆ ತರುವಾಯ ಸದರಿ ಸದಸ್ಯನ ಸ್ಥಾನವು ಖಾಲಿಯಾಗತಕ್ಕದ್ದು.

**20. ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಕಾರ್ಯಗಳು.**- (1) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ರಾಜ್ಯ ಸಮನ್ವಯ ಸಮಿತಿಯ ಕಾರ್ಯ ನಿರ್ವಾಹಕ ಮಂಡಲಿಯಾಗಿರತಕ್ಕದ್ದು ಮತ್ತು ರಾಜ್ಯ ಸಮನ್ವಯ ಸಮಿತಿಯ ನಿರ್ಣಯಗಳನ್ನು ಜಾರಿಗೊಳಿಸುವ ಜವಾಬ್ದಾರಿ ಹೊಂದಿರತಕ್ಕದ್ದು.

(2) ರಾಜ್ಯ ಕಾರ್ಯ ನಿರ್ವಾಹಕ ಸಮಿತಿಯು (1) ನೇ ಉಪ-ಪ್ರಕರಣದ ಉಪಬಂಧಗಳಿಗೆ ಬಾಧಕವಾಗದ ರೀತಿಯಲ್ಲಿ ರಾಜ್ಯ ಸಮನ್ವಯ ಸಮಿತಿಯು ತನಗೆ ವಹಿಸಿಕೊಡಬಹುದಾದಂಥ ಇತರೆ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**21. ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಸಭೆಗಳು.**- ರಾಜ್ಯ ಕಾರ್ಯನಿರ್ವಾಹಕ ಸಮಿತಿ ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು ಮತ್ತು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಅದರ ಸಭೆಗಳಲ್ಲಿ ಅಂಗವಿಕಲರ ವ್ಯವಹಾರಗಳಿಗೆ ಸಂಬಂಧಿಸಿದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕದ್ದು.

**22. ನಿರ್ದಿಷ್ಟ ಉದ್ದೇಶಕ್ಕಾಗಿ ರಾಜ್ಯ ಕಾರ್ಯನಿರ್ವಾಹಕ ಸಮಿತಿಗೆ ಜನರ ತಾತ್ಕಾಲಿಕ ಸಹ ಸದಸ್ಯತ್ವ** :-(1) ರಾಜ್ಯ ಕಾರ್ಯ ನಿರ್ವಾಹಕ ಸಮಿತಿಯು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಕ್ಕಾಗಿ ಈ ಅಧಿನಿಯಮದ ಮೇರೆಗೆ ತನ್ನ ಯಾವುವೇ ಕಾರ್ಯಗಳನ್ನು ನಿರ್ವಹಿಸುವಲ್ಲಿ ಯಾರೇ ವ್ಯಕ್ತಿಯ ನೆರವು ಅಥವಾ ಸಲಹೆಯನ್ನು ಪಡೆಯಬೇಕೆಂದು ಇಚ್ಛಿಸಿದಲ್ಲಿ, ಆ ವ್ಯಕ್ತಿಯನ್ನು ಸಹ ಸದಸ್ಯನನ್ನಾಗಿ ಸೇರಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕಾಗಿ (1) ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಕಾರ್ಯ ನಿರ್ವಾಹಕ ಸಮಿತಿಗೆ ಸಹ ಸದಸ್ಯನಾದ ವ್ಯಕ್ತಿಗೆ, ಆ ಉದ್ದೇಶಕ್ಕೆ ಸಂಬಂಧಿಸಿದ ರಾಜ್ಯ ಕಾರ್ಯ ನಿರ್ವಾಹಕ ಸಮಿತಿಯ ಚರ್ಚೆಗಳಲ್ಲಿ ಭಾಗವಹಿಸುವ ಹಕ್ಕು ಇರತಕ್ಕದ್ದು, ಆದರೆ, ಸಮಿತಿಯ

ಸಭೆಯಲ್ಲಿ ಮತ ಚಲಾಯಿಸುವ ಹಕ್ಕು ಇರತಕ್ಕುದ್ದಲ್ಲ ಮತ್ತು ಅವನು ಇತರ ಯಾವುದೇ ಉದ್ದೇಶಕ್ಕಾಗಿ ಸಮಿತಿಯ ಸದಸ್ಯನಾಗಿರತಕ್ಕದ್ದಲ್ಲ.

(3) ಯಾವುದೇ ಉದ್ದೇಶಕ್ಕಾಗಿ (1) ನೇ ಉಪ-ಪ್ರಕರಣದ ಮೇರೆಗೆ ಸದರಿ ಸಮಿತಿಗೆ ಸಹ ಸದಸ್ಯನಾದ ವ್ಯಕ್ತಿಗೆ ಸದರಿ ಸಮಿತಿಯ ಯಾವುದೇ ಸಭೆಗಳಿಗೆ ಮತ್ತು ಇತರೆ ಕೆಲಸಗಳಲ್ಲಿ ಭಾಗವಹಿಸಿದ್ದಕ್ಕಾಗಿ ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ಫೀಜು ಮತ್ತು ಭತ್ಯಗಳನ್ನು ಸಂದಾಯ ಮಾಡತಕ್ಕದ್ದು.

**23. ನಿರ್ದೇಶನಗಳನ್ನು ನೀಡುವ ಅಧಿಕಾರ.-** ಕೇಂದ್ರ ಸಮನ್ವಯ ಸಮಿತಿಯು ಈ ಅಧಿನಿಯಮದ ಮೇರೆಗೆ ತನ್ನ ಕಾರ್ಯಗಳನ್ನು ಪಾಲಿಸುವಲ್ಲಿ,-

(ಎ) ಕೇಂದ್ರ ಸರ್ಕಾರವು ಲಿಖಿತ ರೂಪದಲ್ಲಿ ನೀಡುವಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು; ಮತ್ತು

(ಬಿ) ರಾಜ್ಯ ಸಮನ್ವಯ ಸಮಿತಿಯು ಕೇಂದ್ರ ಸಮನ್ವಯ ಸಮಿತಿ ಅಥವಾ ರಾಜ್ಯ ಸರ್ಕಾರವು ಲಿಖಿತ ರೂಪದಲ್ಲಿ ನೀಡುವಂಥ ನಿರ್ದೇಶನಗಳನ್ನು ಪಾಲಿಸಲು ಬದ್ಧವಾಗಿರತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ನೀಡಿರುವ ನಿರ್ದೇಶನವು ಕೇಂದ್ರ ಸಮನ್ವಯ ಸಮಿತಿಯು ನೀಡಿದ ಯಾವುದೇ ನಿರ್ದೇಶನಕ್ಕೆ ಅಸಂಗತವಾಗಿದ್ದ ಪಕ್ಷದಲ್ಲಿ, ಅಂಥ ವಿಷಯಗಳನ್ನು ತೀರ್ಮಾನಕ್ಕಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**24. ಖಾಲಿ ಸ್ಥಾನಗಳು ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.-** ಕೇಂದ್ರ ಸಮನ್ವಯ ಸಮಿತಿ, ಕೇಂದ್ರ ಕಾರ್ಯ ನಿರ್ವಾಹಕ ಸಮಿತಿ, ರಾಜ್ಯ ಸಮನ್ವಯ ಸಮಿತಿ ಅಥವಾ ರಾಜ್ಯ ಕಾರ್ಯ ನಿರ್ವಾಹಕ ಸಮಿತಿ ಯಾವುದೇ ಕಾರ್ಯವನ್ನು ಅಥವಾ ವ್ಯವಹರಣೆಗಳನ್ನು ಆ ಸಮಿತಿಗಳಲ್ಲಿ ಯಾವುದೇ ಖಾಲಿ ಸ್ಥಾನ ಇರುವುದೆಂಬ ಆಧಾರದ ಮೇಲೆ ಅಥವಾ ಅಂಥ ಸಮಿತಿಯ ರಚನೆಯಲ್ಲಿನ ಯಾವುದೇ ದೋಷದ ಆಧಾರದ ಮೇಲೆ ಪ್ರಶ್ನಿಸತಕ್ಕದ್ದಲ್ಲ.

## ಅಧ್ಯಾಯ - IV

## ಅಂಗವಿಕಲತೆಯನ್ನು ತಡೆಗಟ್ಟುವುದು ಮತ್ತು ಪ್ರಾರಂಭದಲ್ಲಿಯೇ ಪತ್ತೆ ಹಚ್ಚುವುದು

**25. ಅಂಗವಿಕಲತೆ ಉಂಟಾಗುವುದನ್ನು ತಡೆಗಟ್ಟುವುದಕ್ಕಾಗಿ ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಕೈಗೊಳ್ಳತಕ್ಕ ಕೆಲವು ಕ್ರಮಗಳು.-** ಅಂಗವಿಕಲತೆ ಉಂಟಾಗುವುದನ್ನು ತಡೆಗಟ್ಟುವ ಉದ್ದೇಶದಿಂದ ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಸಾಮರ್ಥ್ಯದ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ,-

(ಎ) ಅಂಗವಿಕಲತೆ ಉಂಟಾಗುವ ಕಾರಣಗಳ ಸಂಬಂಧವಾಗಿ ಸಮೀಕ್ಷೆ, ಅನ್ವೇಷಣೆ ಮತ್ತು ಸಂಶೋಧನೆಗಳನ್ನು ಕೈಗೊಳ್ಳಬೇಕು ಅಥವಾ ಕೈಗೊಳ್ಳುವಂತೆ ಮಾಡಬೇಕು;

(ಬಿ) ಅಂಗವಿಕಲತೆ ತಡೆಗಟ್ಟುವಂಥ ವಿವಿಧ ವಿಧಾನಗಳಿಗೆ ಉತ್ತೇಜನ ನೀಡಬೇಕು;

(ಸಿ) "ಅಂಗವಿಕಲತೆ ಅಪಾಯ ಸಂಭವ" ದ ಪ್ರಕರಣಗಳನ್ನು ಗುರುತಿಸುವ ಸಲುವಾಗಿ ಎಲ್ಲ ಮಕ್ಕಳನ್ನು ವರ್ಷದಲ್ಲಿ ಕನಿಷ್ಠ ಪಕ್ಷ ಒಂದು ಬಾರಿಯಾದರೂ ಪರೀಕ್ಷೆಗೆ ಗುರಿಪಡಿಸಬೇಕು;

(ಡಿ) ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಿಬ್ಬಂದಿಯ ತರಬೇತಿಗಾಗಿ ಸೌಲಭ್ಯಗಳನ್ನು ಕಲ್ಪಿಸಬೇಕು;

(ಇ) ಸಾಮಾನ್ಯ ಆರೋಗ್ಯ ತತ್ವದ ಮತ್ತು ನೈರ್ಮಲ್ಯ ವ್ಯವಸ್ಥೆಯ ಬಗ್ಗೆ ಅರಿವು ಮೂಡಿಸುವ ಆಂದೋಲನವನ್ನು ಪ್ರಾಯೋಜಿಸಬೇಕು ಅಥವಾ ಪ್ರಾಯೋಜಿಸುವಂತೆ

ಮಾಡಬೇಕು ಮತ್ತು ಅವಶ್ಯವಿರುವ ಮಾಹಿತಿಯನ್ನು ಪ್ರಸಾರ ಮಾಡಬೇಕು ಅಥವಾ ಪ್ರಸಾರವಾಗುವಂತೆ ನೋಡಿಕೊಳ್ಳಬೇಕು;

(ಎಫ್) ಪ್ರಸವ ಪೂರ್ವ, ಪ್ರಸವ ಸಮಯ ಮತ್ತು ಪ್ರಸವೋತ್ತರದಲ್ಲಿ ಮಕ್ಕಳ ಮತ್ತು ತಾಯಿಯ ಆರೋಗ್ಯದ ಬಗ್ಗೆ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು;

(ಜಿ) ಪ್ರಾಥಮಿಕ ಪೂರ್ವ ಶಾಲೆಗಳ, ಶಾಲೆಗಳ, ಪ್ರಾಥಮಿಕ ಆರೋಗ್ಯ ಕೇಂದ್ರಗಳ, ಗ್ರಾಮ ಸೇವಕರ ಮತ್ತು ಅಂಗನವಾಡಿ ಕಾರ್ಯಕರ್ತರ ಮೂಲಕ ಸಾರ್ವಜನಿಕರಿಗೆ ತಿಳಿವಳಿಕೆ ನೀಡಬೇಕು;

(ಹೆಚ್) ಅಂಗವಿಕಲತೆ ಉಂಟಾಗುವ ಕಾರಣಗಳ ಬಗ್ಗೆ ಮತ್ತು ಅದು ಬಾರದಂತೆ ಅನುಸರಿಸಬೇಕಾದ ನಿವಾರಕ ಕ್ರಮಗಳ ಬಗ್ಗೆ ದೂರದರ್ಶನ, ರೇಡಿಯೋ ಮತ್ತು ಇತರೆ ಸಮೂಹ ಮಾಧ್ಯಮಗಳ ಮೂಲಕ ಸಹ ಅರಿವು ಮೂಡಿಸಬೇಕು.

## ಅಧ್ಯಾಯ – V

## ಶಿಕ್ಷಣ

**26. ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ಮಕ್ಕಳಿಗೆ ಉಚಿತ ಶಿಕ್ಷಣ ಇತ್ಯಾದಿಗಳನ್ನು ಒದಗಿಸುವುದು.–** ಸಮುಚಿತ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು,–

(ಎ) ಪ್ರತಿಯೊಂದು ಅಂಗವಿಕಲ ಮಗುವು, ಹದಿನೆಂಟು ವರ್ಷ ವಯಸ್ಸು ತಲುಪುವವರೆಗೆ, ಆ ಮಗುವಿಗೆ ಅತ್ಯಂತ ಸೂಕ್ತ ಪರಿಸರದಲ್ಲಿ ಉಚಿತ ಶಿಕ್ಷಣ ಪಡೆಯುವುದಕ್ಕೆ ಅವಕಾಶವಿರುವಂತೆ ನೋಡಿಕೊಳ್ಳಬೇಕು;

(ಬಿ) ಸಾಮಾನ್ಯ ಶಾಲೆಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳಿಗೆ ಸಮಾನ ಅವಕಾಶವನ್ನು ಒದಗಿಸಲು ಪ್ರಯತ್ನಿಸಬೇಕು;

(ಸಿ) ವಿಶೇಷ ಶಿಕ್ಷಣದ ಅವಶ್ಯಕತೆ ಇರುವ ಅಂಗವಿಕಲ ಮಕ್ಕಳಿಗಾಗಿ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ವಿಶೇಷ ಶಾಲೆಗಳನ್ನು ಸ್ಥಾಪಿಸಲು ಉತ್ತೇಜನ ನೀಡಬೇಕಾಗಿದ್ದು ದೇಶದ ಯಾವುದೇ ಭಾಗದಲ್ಲಿ ವಾಸಿಸುವ ಅಂಗವಿಕಲ ಮಕ್ಕಳಿಗೆ ಅಂಥ ಶಾಲೆಗಳಿಗೆ ಪ್ರವೇಶಾವಕಾಶ ದೊರೆಯುವಂತಿರಬೇಕು;

(ಡಿ) ಅಂಗವಿಕಲ ಮಕ್ಕಳಿಗಾಗಿ ವೃತ್ತಿ ತರಬೇತಿ ಸೌಲಭ್ಯಗಳೊಂದಿಗೆ ವಿಶೇಷ ಶಾಲೆಗಳನ್ನು ಒದಗಿಸಲು ಪ್ರಯತ್ನಿಸಬೇಕು.

**27. ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಔಪಚಾರಿಕವಲ್ಲದ ಶಿಕ್ಷಣ, ಇತ್ಯಾದಿಗಳಿಗಾಗಿ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು.–** ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಧಿಸೂಚನೆಯ ಮೂಲಕ ಈ ಮುಂದಿನ ಯೋಜನೆಗಳನ್ನು ರೂಪಿಸತಕ್ಕದ್ದು,–

(ಎ) ಐದನೆಯ ತರಗತಿಯವರೆಗೆ ಶಿಕ್ಷಣವನ್ನು ಪೂರ್ಣಗೊಳಿಸಿದ, ಆದರೆ ಪೂರ್ಣಕಾಲಿಕವಾಗಿ ತಮ್ಮ ಓದನ್ನು ಮುಂದುವರಿಸಲು ಸಾಧ್ಯವಿಲ್ಲದಂಥ ಅಂಗವಿಕಲ ಮಕ್ಕಳ ಸಂಬಂಧದಲ್ಲಿ ಅಂಶಕಾಲಿಕ ಶಿಕ್ಷಣ ತರಗತಿಗಳನ್ನು ನಡೆಸುವುದು;

(ಬಿ) ಹದಿನಾರು ಮತ್ತು ಅದಕ್ಕೂ ಮೇಲ್ಪಟ್ಟ ವಯಸ್ಸಿನ ಮಕ್ಕಳಿಗಾಗಿ ಔಪಚಾರಿಕ ಅಕ್ಷರ ಜ್ಞಾನ ಕಲಿಸಲು ವಿಶೇಷ ಅಂಶಕಾಲಿಕ ಶಿಕ್ಷಣ ತರಗತಿಗಳನ್ನು ನಡೆಸುವುದು;

(ಸಿ) ಸೂಕ್ತ ತರಬೇತಿಯ ನಂತರ ಗ್ರಾಮೀಣ ಪ್ರದೇಶಗಳಲ್ಲಿ ದೊರೆಯುವ ಮಾನವ ಶಕ್ತಿಯನ್ನು ಬಳಸಿಕೊಂಡು ಅವರಿಗೆ ಔಪಚಾರಿಕವಲ್ಲದ ಶಿಕ್ಷಣ ನೀಡುವುದು;

(ಡಿ) ಮುಕ್ತ ಶಾಲೆಗಳ ಅಥವಾ ಮುಕ್ತ ವಿಶ್ವವಿದ್ಯಾನಿಲಯಗಳ ಮೂಲಕ ಶಿಕ್ಷಣ ನೀಡುವುದು;

(ಇ) ತರಗತಿಗಳನ್ನು ನಡೆಸುವುದು ಮತ್ತು ಎಲೆಕ್ಟ್ರಾನಿಕ್ ಅಥವಾ ಇತರೆ ಮಾಧ್ಯಮದ ಮೂಲಕ ಪರಸ್ಪರ ಶಿಕ್ಷಣ ನೀಡುವುದು ಮತ್ತು ಚರ್ಚಿಸುವುದು;

(ಎಫ್) ಪ್ರತಿಯೊಂದು ಅಂಗವಿಕಲ ಮಗುವಿಗೂ, ಅವನ ಶಿಕ್ಷಣಕ್ಕೆ ಅವಶ್ಯವಿರುವ ವಿಶೇಷ ಪುಸ್ತಕ ಮತ್ತು ಸಲಕರಣೆಗಳನ್ನು ಉಚಿತವಾಗಿ ಒದಗಿಸುವುದು.

**28. ಅಂಗವಿಕಲ ಮಕ್ಕಳಿಗೆ ನೆರವಾಗುವ ಹೊಸ ಸಾಧನ ಸಲಕರಣೆಗಳನ್ನು, ಬೋಧನಾ ಸಾಮಗ್ರಿ ಇತ್ಯಾದಿಗಳನ್ನು ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿ ಗೊಳಿಸುವ ಬಗ್ಗೆ ಸಂಶೋಧನೆ.–** ಸಮುಚಿತ ಸರ್ಕಾರವು, ಶಿಕ್ಷಣದಲ್ಲಿ ಅಂಗವಿಕಲ ಮಕ್ಕಳಿಗೆ ಸಮಾನ ಅವಕಾಶಗಳನ್ನು ಒದಗಿಸಲು ಅವಶ್ಯವಿರುವಂಥ ಹೊಸ ಹೊಸ ಸಾಧನ, ಬೋಧನ ಸಲಕರಣೆ, ವಿಶೇಷ ಬೋಧನಾ ಸಾಮಗ್ರಿಗಳು ಅಥವಾ ಇತರೆ ಸಲಕರಣೆಗಳನ್ನು ವಿನ್ಯಾಸಗೊಳಿಸುವ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಸರ್ಕಾರಿ ಮತ್ತು ಸರ್ಕಾರೇತರ ಏಜೆನ್ಸಿಗಳ ಮುಖಾಂತರ ಸೂಕ್ತ ಸಂಶೋಧನೆ ಪ್ರಾರಂಭಿಸತಕ್ಕದ್ದು ಅಥವಾ ಪ್ರಾರಂಭಿಸಲು ತಕ್ಕ ಏರ್ಪಾಟುಗಳನ್ನು ಮಾಡತಕ್ಕದ್ದು.

**29. ಅಂಗವಿಕಲ ಮಕ್ಕಳಿಗಾಗಿ ಶಾಲೆಗಳಲ್ಲಿ ತರಬೇತಿ ಪಡೆದ ಮಾನವ ಶಕ್ತಿಯನ್ನು ವೃದ್ಧಿಗೊಳಿಸಲು ಸಂಬಂಧಪಟ್ಟ ಸರ್ಕಾರಗಳು ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸುವುದು.–** ಸಂಬಂಧಪಟ್ಟ ಸರ್ಕಾರಗಳು ವಿಶೇಷವಾಗಿ ಅಂಗವಿಕಲತೆಯಲ್ಲಿ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ವೃದ್ಧಿಪಡಿಸುವುದಕ್ಕಾಗಿ ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸತಕ್ಕದ್ದು ಮತ್ತು ರಾಷ್ಟ್ರೀಯ ಸಂಸ್ಥೆಗೆ ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳಿಗೆ ನೆರವು ನೀಡತಕ್ಕದ್ದು. ಇದರಿಂದಾಗಿ ಅಂಗವಿಕಲ ಮಕ್ಕಳ ವಿಶೇಷ ಶಾಲೆ ಮತ್ತು ಸಂಯೋಜಿತ ಶಾಲೆಗಳಿಗೆ ತರಬೇತಿ ಪಡೆದ ಅವಶ್ಯವಿರುವ ಮಾನವಶಕ್ತಿ ದೊರೆತಂತಾಗುತ್ತದೆ.

**30. ಸಮುಚಿತ ಸರ್ಕಾರಗಳು ಸಾರಿಗೆ ಸೌಲಭ್ಯ, ಪುಸ್ತಕ ಇತ್ಯಾದಿಗಳನ್ನು ಒದಗಿಸುವುದಕ್ಕಾಗಿ ಸಮಗ್ರ ಶಿಕ್ಷಣ ಯೋಜನೆಯನ್ನು ರೂಪಿಸುವುದು.–** ಈ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ ಸಮುಚಿತ ಸರ್ಕಾರಗಳು ಅಧಿಸೂಚನೆಯ ಮೂಲಕ ಸಮಗ್ರ ಶಿಕ್ಷಣ ನೀತಿಯನ್ನು ರೂಪಿಸತಕ್ಕದ್ದು, ಅದರಲ್ಲೂ ಈ ಕೆಳಕಂಡವುಗಳ ಬಗ್ಗೆ ಉಪಬಂಧ ಕಲ್ಪಿಸಿರತಕ್ಕದ್ದು : –

(ಎ) ಅಂಗವಿಕಲ ಮಕ್ಕಳಿಗೆ ಸಾರಿಗೆ ಸೌಲಭ್ಯ ಅಥವಾ ಅವರ ತಂದೆ ತಾಯಿ ಅಥವಾ ಪೋಷಕರಿಗೆ ಅವರ ಮಕ್ಕಳನ್ನು ಶಾಲೆಗೆ ಕರೆತರಲು ಸಾಧ್ಯವಾಗುವಂತೆ ಬದಲಿ ಹಣಕಾಸಿನ ಪ್ರೋತ್ಸಾಹಗಳನ್ನು ಒದಗಿಸುವುದು;

(ಬಿ) ವೃತ್ತಿಪರ ಮತ್ತು ವೃತ್ತಿ ಕಾರ್ಯದಲ್ಲಿ ತರಬೇತಿ ನೀಡುವ ಸಲುವಾಗಿ ಶಾಲೆ, ಕಾಲೇಜು ಅಥವಾ ಇತರೆ ಶಿಕ್ಷಣ ಸಂಸ್ಥೆಗಳಲ್ಲಿ ಅಂಗವಿಕಲರ ಚಲನ–ವಲನಕ್ಕೆ ಅಡ್ಡಿಉಂಟು ಮಾಡುವಂತಹ ರಚನೆಗಳನ್ನು ತೆಗೆದುಹಾಕುವುದು;

(ಸಿ) ಶಾಲೆಗೆ ಹಾಜರಾಗುವ ಅಂಗವಿಕಲ ಮಕ್ಕಳಿಗೆ ಪುಸ್ತಕ, ಸಮವಸ್ತ್ರ ಮತ್ತು ಇತರೆ ಸಾಮಗ್ರಿಗಳನ್ನು ಒದಗಿಸುವುದು;

(ಡಿ) ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡುವುದು;

(ಇ) ಅಂಗವಿಕಲ ಮಕ್ಕಳಿಗೆ ನೌಕರಿ ದೊರಕಿಸಿಕೊಡುವ ಸಂಬಂಧದಲ್ಲಿ ತಂದೆ ತಾಯಿಯರ ಕುಂದುಕೊರತೆಗಳನ್ನು ಸರಿಪಡಿಸುವ ಸಲುವಾಗಿ ಒಂದು ವಿಭಾಗವನ್ನು ಸ್ಥಾಪಿಸುವುದು;

(ಎಫ್) ಅಂಧ ಮಕ್ಕಳ ಮತ್ತು ಕಡಿಮೆ ದೃಷ್ಟಿ ಇರುವ ಮಕ್ಕಳ ಪ್ರಯೋಜನಕ್ಕಾಗಿ ಗಣಿತ ಸಂಬಂಧವಾದ ಪ್ರಶ್ನೆಗಳನ್ನು ಬಿಟ್ಟುಬಿಡಲು ಪರೀಕ್ಷಾ ಪದ್ಧತಿಯಲ್ಲಿ ಸೂಕ್ತ ಬದಲಾವಣೆ ತರುವುದು;

(ಜಿ) ಅಂಗವಿಕಲ ಮಕ್ಕಳ ಸೌಕರ್ಯಕ್ಕಾಗಿ ಪಠ್ಯ ವಿಷಯಗಳನ್ನು ಪುನರ್ ರಚಿಸುವುದು;

(ಹೆಚ್) ಶ್ರವಣ ತೊಂದರೆಯಿರುವ ಮಕ್ಕಳು ಪಠ್ಯ ವಿಷಯದ ಭಾಗವಾಗಿ ಒಂದೇ ಒಂದು ಭಾಷೆಯನ್ನು ಕಲಿಯುವಂತೆ ಪಠ್ಯ ವಿಷಯಗಳನ್ನು ಪುನರ್ ರಚಿಸುವುದು.

**31. ಶೈಕ್ಷಣಿಕ ಸಂಸ್ಥೆಗಳು, ದೃಷ್ಟಿದೋಷವಿರುವ ವಿದ್ಯಾರ್ಥಿಗಳಿಗೆ ಉಕ್ತಲೇಖಕರನ್ನು ಒದಗಿಸುವುದು.–** ಎಲ್ಲ ಶೈಕ್ಷಣಿಕ ಸಂಸ್ಥೆಗಳು ದೃಷ್ಟಿದೋಷವಿರುವ ವಿದ್ಯಾರ್ಥಿಗಳಿಗೆ ಮತ್ತು ಕಡಿಮೆ ದೃಷ್ಟಿ ಇರುವ ವಿದ್ಯಾರ್ಥಿಗಳಿಗೆ ಉಕ್ತಲೇಖಕರನ್ನು ಒದಗಿಸತಕ್ಕದ್ದು ಅಥವಾ ಒದಗಿಸಲು ಏರ್ಪಾಡು ಮಾಡತಕ್ಕದ್ದು.

## ಅಧ್ಯಾಯ – VI

## ಉದ್ಯೋಗ

**32. ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಿಡಬಹುದಾದ ಹುದ್ದೆಗಳನ್ನು ಗುರ್ತಿಸುವುದು.–** ಸಂಬಂಧಪಟ್ಟ ಸರ್ಕಾರವು,–

(ಎ) ಕಾರ್ಯ ಸಂಸ್ಥೆಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ ಮೀಸಲಿಡಬಹುದಾದ ಹುದ್ದೆಗಳನ್ನು ಗುರ್ತಿಸತಕ್ಕದ್ದು;

(ಬಿ) ಮೂರು ವರ್ಷಗಳಿಗೆ ಮೀರದಂತೆ ನಿಯತಕಾಲಿಕ ಅಂತರಗಳಲ್ಲಿ ಗುರ್ತಿಸಲಾದ ಹುದ್ದೆಗಳ ಪಟ್ಟಿಯನ್ನು ಅವಲೋಕಿಸತಕ್ಕದ್ದು ಮತ್ತು ತಂತ್ರಜ್ಞಾನದಲ್ಲಿನ ಬೆಳವಣಿಗೆಗಳನ್ನು ಗಣನೆಗೆ ತೆಗೆದುಕೊಂಡು ಆ ದಿನಾಂಕದವರೆಗಿನ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

**33. ಹುದ್ದೆಗಳ ಮೀಸಲಾತಿ.–** ಸಂಬಂಧಪಟ್ಟ ಪ್ರತಿಯೊಂದು ಸರ್ಕಾರವು ಈ ಮುಂದಿನ ಪ್ರತಿಯೊಂದು ಅಂಗವಿಕಲತೆಯ ಸಂಬಂಧದಲ್ಲಿ ಅಂದರೆ :–

(i) ದೃಷ್ಟಿಹೀನತೆ ಅಥವಾ ಕಡಿಮೆ ದೃಷ್ಟಿ ಇರುವಿಕೆ;

(ii) ಶ್ರವಣ ಶಕ್ತಿ ಇಲ್ಲದಿರುವುದು;

(iii) ಚಲನ–ವಲನ ಶಕ್ತಿಯ ವಿಕಲತೆ ಅಥವಾ ಮಿದುಳಿನ ಪಾರ್ಶ್ವವಾಯು (ಸೆರೆಬ್ರಲ್ ಪಾಲ್ಸಿ) ಇವುಗಳ ಸಂಬಂಧದಲ್ಲಿ ಶೇ.1 ರಷ್ಟು ಅಂಗವಿಕಲತೆ ಇರುವ ವ್ಯಕ್ತಿಗಳನ್ನು ಗುರ್ತಿಸಿ, ಹಾಗೆ ಗುರ್ತಿಸಲಾದ ಅಂಗವಿಕಲತೆ ಇರುವ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಶೇ.3 ಕ್ಕಿಂತ ಕಡಿಮೆ ಇಲ್ಲದಂತೆ ಹುದ್ದೆಗಳನ್ನು ನಿಗದಿಪಡಿಸತಕ್ಕದ್ದು:

ಪರಂತು, ಸಂಬಂಧಪಟ್ಟ ಸರ್ಕಾರವು, ಯಾವುದೇ ಇಲಾಖೆ ಅಥವಾ ಕಾರ್ಯ ಸಂಸ್ಥೆಯಲ್ಲಿ ಯಾವ ರೀತಿಯ ಕೆಲಸವನ್ನು ನಿರ್ವಹಿಸಲಾಗುತ್ತಿದೆ ಎಂಬುದನ್ನು ಮನಗಂಡು ಅಧಿಸೂಚನೆಯ ಮೂಲಕ ಮತ್ತು ಅಂಥ ಅಧಿಸೂಚನೆಯಲ್ಲಿ ಷರತ್ತುಗಳನ್ನೇನಾದರೂ ನಿರ್ದಿಷ್ಟಪಡಿಸಿದ್ದರೆ ಅವುಗಳಿಗೆ ಒಳಪಟ್ಟು ಈ ಪ್ರಕರಣದ ಉಪಬಂಧಗಳಿಂದ ಯಾವುದೇ ಕಾರ್ಯ ಸಂಸ್ಥೆಗೆ ವಿನಾಯಿತಿ ಕೊಡಬಹುದು.

**34. ವಿಶೇಷ ಉದ್ಯೋಗ ವಿನಿಮಯ ಕೇಂದ್ರ.–** (1) ಸಂಬಂಧಪಟ್ಟ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ದಿನಾಂಕದಿಂದ, ಪ್ರತಿಯೊಂದು ಕಾರ್ಯ ಸಂಸ್ಥೆಯ ನಿಯೋಜಕನನ್ನು, ಅಂಥ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಆ ಕಾರ್ಯ ಸಂಸ್ಥೆಯಲ್ಲಿ ಇರುವ ಅಥವಾ ನಿಯೋಜಿಸಬಹುದಾದ ಖಾಲಿ ಸ್ಥಾನಗಳ ಹುದ್ದೆಗಳ ಸಂಬಂಧದಲ್ಲಿ ನಿಯಮಿಸಬಹುದಾದಂಥ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ನಿರ್ದಿಷ್ಟ ಪಡಿಸಬಹುದಾದಂಥ ಮಾಹಿತಿ ಅಥವಾ ವಿವರ ಪಟ್ಟಿಗಳನ್ನು ಒದಗಿಸಲು ಅಗತ್ಯ ಪಡಿಸತಕ್ಕದ್ದು ಮತ್ತು ಕಾರ್ಯ ಸಂಸ್ಥೆಯು ತರುವಾಯ ಅಂಥ ಕೋರಿಕೆಯನ್ನು ಪಾಲಿಸತಕ್ಕದ್ದು.

(2) ಒದಗಿಸಬೇಕಾದ ಮಾಹಿತಿ ಅಥವಾ ವಿವರಗಳನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಅಂತರಾವಧಿಗಳಲ್ಲಿ ಒದಗಿಸತಕ್ಕುದೋ ಹಾಗೆ ಒದಗಿಸತಕ್ಕದ್ದು ಮತ್ತು ಅವು ಗೊತ್ತು ಪಡಿಸಬಹುದಾದಂಥ ರೀತಿಯಲ್ಲಿ ಇರತಕ್ಕದ್ದು.

**35. ಯಾವುದೇ ಕಾರ್ಯ ಸಂಸ್ಥೆಯ ವಶದಲ್ಲಿರುವ ದಾಖಲೆಯನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕೆ ಅಧಿಕಾರ.–** ವಿಶೇಷ ಉದ್ಯೋಗ ವಿನಿಮಯ ಕೇಂದ್ರದಿಂದ ಲಿಖಿತದಲ್ಲಿ ಅಧಿಕಾರ ಪಡೆದ ಯಾರೇ ವ್ಯಕ್ತಿಯು, ಯಾವುದೇ ಕಾರ್ಯ ಸಂಸ್ಥೆಯ ವಶದಲ್ಲಿರುವ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿರತಕ್ಕದ್ದು ಮತ್ತು ಅಂಥ ದಾಖಲೆಯನ್ನು ಅಥವಾ ದಸ್ತಾವೇಜುಗಳನ್ನು ಇಟ್ಟಿರಬಹುದೆಂದು ಅವನು ಭಾವಿಸುವಂಥ ಸ್ಥಳಗಳಿಗೆ ಯಾವುದೇ ಯುಕ್ತ ಕಾಲದಲ್ಲಿ ಪ್ರವೇಶಿಸಬಹುದು ಮತ್ತು ಅವುಗಳನ್ನು ಪರೀಕ್ಷಿಸಬಹುದು ಅಥವಾ ಸಂಬಂಧಪಟ್ಟ ದಾಖಲೆಯನ್ನು ಅಥವಾ ದಸ್ತಾವೇಜುಗಳ ನಕಲುಗಳನ್ನು ತೆಗೆದುಕೊಳ್ಳಬಹುದು ಅಥವಾ ಯಾವುದೇ ಮಾಹಿತಿಯನ್ನು ಪಡೆಯುವುದಕ್ಕಾಗಿ ಅವಶ್ಯವಿರುವ ಯಾವುದೇ ಪ್ರಶ್ನೆಯನ್ನು ಕೇಳಬಹುದು.

**36. ಭರ್ತಿ ಮಾಡದೇ ಇರುವ ಖಾಲಿ ಹುದ್ದೆಗಳನ್ನು ಮುಂದುವರಿಸಿಕೊಂಡು ಹೋಗುವುದು.–** ಯಾವುದೇ ನೇಮಕಾತಿ ವರ್ಷದಲ್ಲಿ 33 ನೇ ಪ್ರಕರಣದ ಮೇರೆಗಿನ ಯಾವುದೇ ಖಾಲಿ ಹುದ್ದೆಯನ್ನು ಸೂಕ್ತ ಅಂಗವಿಕಲ ವ್ಯಕ್ತಿಗಳು ದೊರೆಯದೆ ಇದ್ದ ಕಾರಣಕ್ಕಾಗಿ ಅಥವಾ ಯಾವುದೇ ಇತರ ಸಾಕಷ್ಟು ಕಾರಣಕ್ಕಾಗಿ ಭರ್ತಿ ಮಾಡಲು ಸಾಧ್ಯವಾಗದೇ ಇದ್ದಾಗ, ಅಂಥ ಖಾಲಿ ಹುದ್ದೆಯನ್ನು ಮುಂದಿನ ನೇಮಕಾತಿ ವರ್ಷಕ್ಕೆ ಮುಂದುವರಿಸಿಕೊಂಡು ಹೋಗತಕ್ಕದ್ದು ಮತ್ತು ಮುಂದಿನ ನೇಮಕಾತಿ ವರ್ಷದಲ್ಲೂ ಸೂಕ್ತ ಅಂಗವಿಕಲ ವ್ಯಕ್ತಿ ದೊರೆಯದಿದ್ದಲ್ಲಿ, ಮೂರು ಪ್ರವರ್ಗಗಳ ಪೈಕಿ ಆಂತರಿಕ ಬದಲಾವಣೆಯ ಮೂಲಕ ಅದನ್ನು ತುಂಬಬಹುದು ಮತ್ತು ಆ ವರ್ಷದಲ್ಲಿನ ಹುದ್ದೆಗಾಗಿ ಅಂಗವಿಕಲ ವ್ಯಕ್ತಿಗಳು ದೊರೆಯದಿದ್ದಾಗ, ನಿಯೋಜಕನು ಅಂಗವಿಕಲ ವ್ಯಕ್ತಿಯನ್ನು ಹೊರತುಪಡಿಸಿ ಇತರೆ ಯಾವನೇ ವ್ಯಕ್ತಿಯನ್ನು ನೇಮಕಾತಿ ಮಾಡಿಕೊಳ್ಳಬಹುದು:

ಪರಂತು, ಒಂದು ಕಾರ್ಯ ಸಂಸ್ಥೆಯಲ್ಲಿ ಖಾಲಿ ಇರುವ ಹುದ್ದೆಗಳ ಸ್ವರೂಪದ ಕಾರಣದಿಂದಾಗಿ ಅಂಥ ಪ್ರವರ್ಗದ ವ್ಯಕ್ತಿಯನ್ನು ನಿಯೋಜಿಸಿಕೊಳ್ಳಲಾಗದಿದ್ದ ಸಂದರ್ಭದಲ್ಲಿ ಅಂಥ ಖಾಲಿ ಹುದ್ದೆಯನ್ನು ಸಂಬಂಧಪಟ್ಟ ಸರ್ಕಾರದ ಪೂರ್ವ ಅನುಮೋದನೆ ಪಡೆದು ಮೂರು ಪ್ರವರ್ಗಗಳ ಪೈಕಿ ಆಂತರಿಕ ಬದಲಾವಣೆ ಮಾಡಿಕೊಳ್ಳಬಹುದು.

**37. ನಿಯೋಜಕರು ದಾಖಲೆಗಳನ್ನು ನಿರ್ವಹಿಸುವುದು.–** (1) ಪ್ರತಿಯೊಬ್ಬ ನಿಯೋಜಕನು, ತನ್ನ ಕಾರ್ಯ ಸಂಸ್ಥೆಯಲ್ಲಿ ನಿಯೋಜಿತನಾದ ಅಂಗವಿಕಲ ವ್ಯಕ್ತಿಗಳ ಸಂಬಂಧದಲ್ಲಿ, ಸಂಬಂಧಪಟ್ಟ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ದಾಖಲೆಗಳನ್ನು ನಿರ್ವಹಿಸತಕ್ಕದ್ದು.

(2) (1) ನೇ ಉಪ-ಪ್ರಕರಣದ ಮೇರೆಗೆ ನಿರ್ವಹಿಸಲಾದ ದಾಖಲೆಗಳನ್ನು ಪರಿಶೀಲಿಸಲು, ಸಂಬಂಧಪಟ್ಟ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಸಂಬಂಧವಾಗಿ ಅಧಿಕಾರ ನೀಡಿರಬಹುದಾದಂಥ ವ್ಯಕ್ತಿಗಳಿಗೆ ಎಲ್ಲ ಸೂಕ್ತ ಸಮಯದಲ್ಲಿ ಅವಕಾಶವಿರತಕ್ಕದ್ದು.

**38. ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ ದೊರಕುವುದನ್ನು ಖಚಿತಪಡಿಸಿಕೊಳ್ಳುವ ಯೋಜನೆ.-** (1) ಸಂಬಂಧಪಟ್ಟ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಅಂಗವಿಕಲ ವ್ಯಕ್ತಿಗಳಿಗೆ ಉದ್ಯೋಗ ದೊರಕುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಧಿಸೂಚನೆಯ ಮೂಲಕ ಯೋಜನೆಗಳನ್ನು ರೂಪಿಸತಕ್ಕದ್ದು ಮತ್ತು ಅಂಥ ಯೋಜನೆಗಳಲ್ಲಿ ಈ ಮುಂದಿನವುಗಳ ಬಗ್ಗೆ ಉಪಬಂಧ ಕಲ್ಪಿಸತಕ್ಕದ್ದು :-

(ಎ) ಅಂಗವಿಕಲ ವ್ಯಕ್ತಿಗಳ ತರಬೇತಿ ಮತ್ತು ಕ್ಷೇಮಾಭಿವೃದ್ಧಿ;

(ಬಿ) ಹೆಚ್ಚಿನ ವಯೋಮಿತಿಯನ್ನು ಸಡಿಲಗೊಳಿಸುವುದು;

(ಸಿ) ಉದ್ಯೋಗವನ್ನು ವಿನಿಯಮಿಸುವುದು;

(ಡಿ) ಅಂಗವಿಕಲ ವ್ಯಕ್ತಿಗಳು ನಿಯೋಜಿತರಾದ ಸ್ಥಳಗಳಲ್ಲಿ ಆರೋಗ್ಯ ಮತ್ತು ಸುರಕ್ಷತೆಯ ಕ್ರಮಗಳನ್ನು ತೆಗೆದುಕೊಳ್ಳುವುದು ಮತ್ತು ಅಂಥ ಸ್ಥಳಗಳಲ್ಲಿ ಅವರು ಸುಲಭವಾಗಿ ಓಡಾಡುವಂಥ ವ್ಯವಸ್ಥೆ ಮಾಡುವುದು;

(ಇ) ಈ ಯೋಜನೆಯ ಕಾರ್ಯಾಚರಣೆಯ ವೆಚ್ಚವನ್ನು ಯಾವ ರೀತಿಯಲ್ಲಿ ಮತ್ತು ಯಾವ ವ್ಯಕ್ತಿಗಳು ವಹಿಸಿಕೊಳ್ಳಬೇಕೆಂಬುದು; ಮತ್ತು

(ಎಫ್) ಯೋಜನೆಯ ನಿರ್ವಹಣೆಗೆ ಜವಾಬ್ದಾರಿಯಾಗಿರುವ ಪ್ರಾಧಿಕಾರದ ರಚನೆ.

**39. ಎಲ್ಲ ಶೈಕ್ಷಣಿಕ ಸಂಸ್ಥೆಗಳು ಅಂಗವಿಕಲ ವ್ಯಕ್ತಿಗಳಿಗೆ ಸ್ಥಾನಗಳನ್ನು ಮೀಸಲಿಡುವುದು.-** ಎಲ್ಲ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳು ಮತ್ತು ಸರ್ಕಾರದಿಂದ ಸಹಾಯಧನ ಪಡೆಯುತ್ತಿರುವ ಇತರೆ ಶೈಕ್ಷಣಿಕ ಸಂಸ್ಥೆಗಳು, ಅಂಗವಿಕಲ ವ್ಯಕ್ತಿಗಳಿಗಾಗಿ ಶೇಕಡಾ ಮೂರಕ್ಕೆ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮೀಸಲಿಡತಕ್ಕದ್ದು.

**40. ದಾರಿದ್ರ್ಯ ನಿವಾರಣಾ ಯೋಜನೆಗಳಲ್ಲಿ ಖಾಲಿ ಸ್ಥಾನಗಳನ್ನು ಮೀಸಲಿಡುವುದು.-** ಸಂಬಂಧಪಟ್ಟ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ದಾರಿದ್ರ್ಯ ನಿವಾರಣೆಯ ಎಲ್ಲ ಯೋಜನೆಗಳಲ್ಲಿ ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಶೇಕಡಾ ಮೂರಕ್ಕೆ ಕಡಿಮೆ ಇಲ್ಲದಷ್ಟು ಸ್ಥಾನಗಳನ್ನು ಮೀಸಲಿಡತಕ್ಕದ್ದು.

**41. ನಿಯೋಜಕರು ತಮ್ಮಲ್ಲಿರುವ ಕೆಲಸಗಾರರ ಸಂಖ್ಯೆಯಲ್ಲಿ ಶೇಕಡಾ ಐದರಷ್ಟು ಅಂಗವಿಕಲ ನೌಕರರೇ ಇದ್ದಾರೆಂದು ಖಚಿತಪಡಿಸಿದರೆ ಅಂಥ ನಿಯೋಜಕರಿಗೆ ಪ್ರೋತ್ಸಾಹಕಗಳು.-** ಸಂಬಂಧಪಟ್ಟ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿಯ ಮಿತಿಗಳ ಒಳಗೆ ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿನ ನಿಯೋಜಕರು ತಮ್ಮಲ್ಲಿರುವ ಕೆಲಸಗಾರರ ಪೈಕಿ ಕನಿಷ್ಠ ಶೇಕಡಾ ಐದರಷ್ಟು ಅಂಗವಿಕಲರನ್ನು ನೇಮಿಸಿಕೊಂಡಿರುವುದಾಗಿ ಖಚಿತಪಡಿಸಿದರೆ ಅಂಥ ನಿಯೋಜಕರಿಗೆ ಪ್ರೋತ್ಸಾಹಕಗಳನ್ನು ನೀಡತಕ್ಕದ್ದು.

## ಅಧ್ಯಾಯ - VII

## ದೃಢೀಕರಿಸುವ ಕ್ರಮ

**42. ಅಂಗವಿಕಲ ವ್ಯಕ್ತಿಗಳಿಗೆ ಸಾಧನಗಳು ಮತ್ತು ಉಪಕರಣಗಳು.-** ಸಂಬಂಧಪಟ್ಟ ಸರ್ಕಾರಗಳು ಅಧಿಸೂಚನೆಯ ಮೂಲಕ ಅಂಗವಿಕಲ ವ್ಯಕ್ತಿಗಳಿಗೆ ಸಾಧನಗಳು ಮತ್ತು ಉಪಕರಣಗಳನ್ನು ಒದಗಿಸುವುದಕ್ಕೆ ಯೋಜನೆಗಳನ್ನು ರೂಪಿಸತಕ್ಕದ್ದು.

**43. ಕೆಲವು ಉದ್ದೇಶಗಳಿಗಾಗಿ ಭೂಮಿಯನ್ನು ಆದ್ಯತೆಯ ಮೇಲೆ ಹಂಚಿಕೆ ಮಾಡುವಂತಹ ಯೋಜನೆಗಳು.-** ಸಂಬಂಧಪಟ್ಟ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಅಧಿಸೂಚನೆಯ ಮೂಲಕ ಅಂಗವಿಕಲ ವ್ಯಕ್ತಿಗಳಿಗೆ ರಿಯಾಯಿತಿ ದರಗಳಲ್ಲಿ ಭೂಮಿಯನ್ನು ಆದ್ಯತೆ ಮೇಲೆ ಹಂಚಿಕೆ ಮಾಡುವಂತಹ ಯೋಜನೆಗಳನ್ನು ರೂಪಿಸತಕ್ಕದ್ದು, ಅವುಗಳೆಂದರೆ :-

(ಎ) ಮನೆ;

(ಬಿ) ವ್ಯಾಪಾರದ ವ್ಯವಸ್ಥೆ;

(ಸಿ) ವಿಶೇಷ ಮನೋರಂಜನ ಕೇಂದ್ರಗಳ ಸ್ಥಾಪನೆ;

(ಡಿ) ವಿಶೇಷ ಶಾಲೆಗಳ ಸ್ಥಾಪನೆ;

(ಇ) ಸಂಶೋಧನಾ ಕೇಂದ್ರಗಳ ಸ್ಥಾಪನೆ;

(ಎಫ್) ಅಂಗವಿಕಲ ಉದ್ಯಮಿಗಳಿಂದ ಕಾರ್ಖಾನೆಗಳ ಸ್ಥಾಪನೆ.

## ಅಧ್ಯಾಯ - VIII

## ಭೇದಭಾವ ಮಾಡದಿರುವುದು

**44. ಸಾರಿಗೆ ವ್ಯವಸ್ಥೆಯಲ್ಲಿ ಭೇದಭಾವ ಮಾಡದಿರುವುದು :-** ಸಾರಿಗೆ ವಲಯದ ಕಾರ್ಯ ಸಂಸ್ಥೆಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿ ಸಾಮರ್ಥ್ಯದ ಮಿತಿಗಳೊಳಗೆ ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಈ ಕೆಳಕಂಡ ವಿಶೇಷ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಎಂದರೆ:-

(ಎ) ರೈಲು ಬೋಗಿಗಳಲ್ಲಿ, ಬಸ್ಸುಗಳಲ್ಲಿ, ಹಡಗುಗಳಲ್ಲಿ ಮತ್ತು ವಿಮಾನಗಳಲ್ಲಿ ಅಂಗವಿಕಲ ವ್ಯಕ್ತಿಗಳು ಸುಲಭವಾಗಿ ಒಳಬರಲು ಅನುಕೂಲವಾಗುವಂಥ ವಿಧಾನವನ್ನು ಅಳವಡಿಸುವುದು;

(ಬಿ) ರೈಲುಬೋಗಿ, ಹಡಗು, ವಿಮಾನಗಳಲ್ಲಿ ಮತ್ತು ನಿರೀಕ್ಷಣಾ ಕೊಠಡಿಗಳಲ್ಲಿ ಗಾಲಿ ಕುರ್ಚಿ ಬಳಸುವಂತಹವರು ಸುಲಭವಾಗಿ ಒಳಹೋಗಿ ಬರುವಂತಹ ಶೌಚಾಲಯಗಳನ್ನು ಅಳವಡಿಸುವುದು.

**45. ರಸ್ತೆ ಬಳಕೆ ವಿಷಯದಲ್ಲಿ ಭೇದಭಾವ ಮಾಡದಿರುವುದು.-** ಸಂಬಂಧಪಟ್ಟ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು, ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ, ಈ ಮುಂದಿನವುಗಳಿಗೆ ಅವಕಾಶ ಕಲ್ಪಿಸತಕ್ಕದ್ದು, ಎಂದರೆ-

(ಎ) ಕಣ್ಣಿನ ದೃಷ್ಟಿದೋಷ ಇರುವಂತಹ ಅಂಗವಿಕಲ ವ್ಯಕ್ತಿಗಳಿಗಾಗಿ ಸಾರ್ವಜನಿಕ ರಸ್ತೆಗಳಲ್ಲಿ ಕೆಂಪು ದೀಪಗಳಿರುವೆಡೆಗಳಲ್ಲಿ ಶಬ್ದ ಸಂಕೇತ ಸಾಧನಗಳನ್ನು ಸ್ಥಾಪಿಸುವುದು;

(ಬಿ) ಗಾಲಿಕುರ್ಚಿ ಬಳಕೆದಾರರು ಸುಲಭವಾಗಿ ಹೋಗಿ ಬರುವಂತಾಗಲು ಪಾದಚಾರಿ ದಾರಿಗಳಲ್ಲಿನ ರಸ್ತೆ ಉಬ್ಬುಗಳನ್ನು ತೆಗೆದು ಹಾಕುವುದು ಮತ್ತು ಇಳಿಜಾರು ದಾರಿಗಳನ್ನು ಮಾಡುವುದು;

(ಸಿ) ಅಂಧರಿಗಾಗಿ ಅಥವಾ ಕಣ್ಣಿನ ದೃಷ್ಟಿ ಕಡಿಮೆ ಇರುವವರಿಗಾಗಿ ಜಿಬ್ರಾ ಕ್ರಾಸಿಂಗ್‌ನ ಮೇಲ್ಮೈ ಮೇಲೆ ಸಂಕೇತ ಗುರುತುಗಳನ್ನು ಕೊರೆದಿರತಕ್ಕದ್ದು;

(ಡಿ) ಅಂಧರಿಗಾಗಿ ಅಥವಾ ಕಣ್ಣಿನ ದೃಷ್ಟಿ ಕಡಿಮೆ ಇರುವವರಿಗಾಗಿ ರೈಲ್ವೆ ಫ್ಲಾಟ್ ಫಾರಂನ ಕೊನೆಗಳಲ್ಲಿ ಸಂಕೇತ ಗುರುತುಗಳನ್ನು ಕೊರೆದಿರತಕ್ಕದ್ದು;

(ಇ) ಅಂಗವಿಕಲತೆಯ ಸೂಕ್ತ ಸಂಕೇತಗಳನ್ನು ರೂಪಿಸುವುದು;

(ಎಫ್) ಎಚ್ಚರಿಕೆ ಸಂಕೇತಗಳನ್ನು ಸೂಕ್ತ ಸ್ಥಳಗಳಲ್ಲಿ ಸ್ಥಾಪಿಸುವುದು.

**46. ಕಟ್ಟಡ ಪ್ರದೇಶದಲ್ಲಿ ಭೇದಭಾವ ಮಾಡದಿರುವುದು.**- ಸಂಬಂಧಪಟ್ಟ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸಿನ ಮತ್ತು ಅಭಿವೃದ್ಧಿ ಮಿತಿಗಳೊಳಗೆ ಈ ಮುಂದಿನವುಗಳಿಗೆ ಅವಕಾಶ ಕಲ್ಪಿಸತಕ್ಕದ್ದು, ಎಂದರೆ-

(ಎ) ಸಾರ್ವಜನಿಕ ಕಟ್ಟಡಗಳಲ್ಲಿ ಇಳಿಜಾರು ನಿರ್ಮಾಣ ವ್ಯವಸ್ಥೆಯನ್ನು ಕಲ್ಪಿಸುವುದು;

(ಬಿ) ಗಾಲಿ ಕುರ್ಚಿ ಬಳಕೆದಾರರಿಗೆ ಅನುಕೂಲವಾಗುವಂತೆ ಶೌಚಾಲಯಗಳನ್ನು ಅಳವಡಿಸುವುದು;

(ಸಿ) ಎಲಿವೇಟರುಗಳಲ್ಲಿ ಅಥವಾ ಲಿಫ್ಟ್‌ಗಳಲ್ಲಿ ಬ್ರೆಲ್ ಸಂಕೇತಗಳನ್ನು ಮತ್ತು ಕಿವಿಗೆ ಕೇಳಿಸುವಂತಹ ಸಂಕೇತಗಳನ್ನು ಕಲ್ಪಿಸುವುದು;

(ಡಿ) ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಇತರೆ ವೈದ್ಯಕೀಯ ಚಿಕಿತ್ಸಾ ಸಂಸ್ಥೆ ಮತ್ತು ಪುನರ್ ಸ್ಥಾಪನೆ ಸಂಸ್ಥೆಗಳಲ್ಲಿ ಇಳಿಜಾರು ಮಾರ್ಗ ವ್ಯವಸ್ಥೆಯನ್ನು ಕಲ್ಪಿಸುವುದು.

**47. ಸರ್ಕಾರಿ ಉದ್ಯೋಗದಲ್ಲಿ ಭೇದಭಾವ ಮಾಡದಿರುವುದು.**- (1) ಒಬ್ಬ ವ್ಯಕ್ತಿಯು ಯಾವುದೇ ಸಂಸ್ಥೆಯಲ್ಲಿ ಸೇವೆಯಲ್ಲಿರುವಾಗ ಅಂಗವಿಕಲನಾದರೆ ಆ ವ್ಯಕ್ತಿಯನ್ನು ಕೆಲಸದಿಂದ ತೆಗೆದುಹಾಕತಕ್ಕದ್ದಲ್ಲ ಅಥವಾ ಅವನ ದರ್ಜೆಯನ್ನು ಇಳಿಸತಕ್ಕದ್ದಲ್ಲ:

ಪರಂತು, ಒಬ್ಬ ನೌಕರನು ಅಂಗವಿಕಲನಾದ ತರುವಾಯ ಅವನು ಹೊಂದಿರುವ ಹುದ್ದೆಗೆ ಅವನು ಸೂಕ್ತನಲ್ಲವೆಂದು ಪರಿಗಣಿಸಿದ ಪಕ್ಷದಲ್ಲಿ, ಅದೇ ವೇತನ ಶ್ರೇಣಿ ಮತ್ತು ಸೇವಾ ಸೌಲಭ್ಯಗಳೊಂದಿಗೆ ಅವನನ್ನು ಇತರೆ ಹುದ್ದೆಗೆ ವರ್ಗಾಯಿಸಬಹುದು:

ಮತ್ತೂ ಪರಂತು, ಅಂಥ ನೌಕರನನ್ನು ಯಾವುದೇ ಇತರ ಹುದ್ದೆಗೆ ಹೊಂದಿಸುವುದು ಸಾಧ್ಯವಾಗದಿದ್ದರೆ, ಸೂಕ್ತ ಹುದ್ದೆ ದೊರೆಯುವವರೆಗೆ ಅಥವಾ ಸೇವಾ ನಿವೃತ್ತಿ ವಯಸ್ಸನ್ನು ಹೊಂದುವವರೆಗೆ ಇದರಲ್ಲಿ ಯಾವುದು ಮೊದಲಾಗುವುದೋ ಅಲ್ಲಿಯವರೆಗೆ ಅವನನ್ನು ಸಂಖ್ಯಾತಿರಿಕ್ತ (ಸೂಪರ್‌ನ್ಯೂಮರರಿ) ಹುದ್ದೆಯಲ್ಲಿ ಇರಿಸಿಕೊಳ್ಳತಕ್ಕದ್ದು.

(2) ಅಂಗವಿಕಲನೆಂಬ ಕಾರಣಕ್ಕಾಗಿ ಯಾವನೇ ವ್ಯಕ್ತಿಗೆ ಯಾವುದೇ ಬಡ್ತಿಯನ್ನು ನಿರಾಕರಿಸತಕ್ಕುದಲ್ಲ:

ಪರಂತು, ಸಂಬಂಧಪಟ್ಟ ಸರ್ಕಾರವು, ಯಾವುದೇ ಸಂಸ್ಥೆಯಲ್ಲಿ ನಿರ್ವಹಿಸಲಾಗುತ್ತಿರುವ ಕೆಲಸದ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು, ಅಧಿಸೂಚನೆಯ ಮೂಲಕ ಮತ್ತು ಅಂಥ ಷರತ್ತುಗಳೇನಾದರೂ ಇದ್ದರೆ ಅವುಗಳನ್ನು ಈ ಅಧಿಸೂಚನೆಯಲ್ಲಿ ನಮೂದಿಸುವುದಕ್ಕೆ ಒಳಪಟ್ಟು, ಈ ಪ್ರಕರಣದ ಉಪಬಂಧಗಳಿಂದ ಯಾವುದೇ ಕಾರ್ಯ ಸಂಸ್ಥೆಗೆ ವಿನಾಯಿತಿ ನೀಡಬಹುದು.

## ಅಧ್ಯಾಯ - IX

## ಸಂಶೋಧನೆ ಮತ್ತು ಮಾನವ ಶಕ್ತಿ ಅಭಿವೃದ್ಧಿ

**48. ಸಂಶೋಧನೆ.-** ಸಂಬಂಧಪಟ್ಟ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಇತರ ಎಲ್ಲ ವಿಷಯಗಳ ಜೊತೆಗೆ ಈ ಮುಂದಿನ ಕ್ಷೇತ್ರಗಳಲ್ಲಿ ಸಂಶೋಧನೆಗೆ ಪ್ರೋತ್ಸಾಹಿಸತಕ್ಕದ್ದು :-

(ಎ) ಅಂಗವಿಕಲತೆಯನ್ನು ನಿವಾರಿಸುವುದು;

(ಬಿ) ಪುನರ್ ವ್ಯವಸ್ಥೆ-ಸಮುದಾಯ ಆಧಾರಿತ ಪುನರ್ ವ್ಯವಸ್ಥೆಯೂ ಸೇರಿ;

(ಸಿ) ಅವರ ಮಾನಸಿಕ-ಸಾಮಾಜಿಕ ವಿಷಯಗಳೂ ಸೇರಿದಂತೆ ಸಹಾಯಕಾರಿ ಸಾಧನಗಳನ್ನು ಅಭಿವೃದ್ಧಿಪಡಿಸುವುದು;

(ಡಿ) ಉದ್ಯೋಗಗಳನ್ನು ಗುರುತಿಸುವುದು;

(ಇ) ಕಚೇರಿ ಮತ್ತು ಕಾರ್ಖಾನೆಗಳಲ್ಲಿ ಆಂತರಿಕ ಮಾರ್ಪಾಡುಗಳನ್ನು ಮಾಡುವುದು.

**49. ಸಂಶೋಧನೆ ಕೈಗೊಳ್ಳಲು ಸಾಧ್ಯವಾಗುವಂತೆ ವಿಶ್ವವಿದ್ಯಾಲಯಗಳಿಗೆ ಹಣಕಾಸು ನೆರವು ಒದಗಿಸುವುದು.-** ವಿಶ್ವವಿದ್ಯಾಲಯ, ಉನ್ನತ ಶಿಕ್ಷಣ ಕಲ್ಪಿಸುವ ಇತರೆ ಸಂಸ್ಥೆ, ವೃತ್ತಿಪರ ಮಂಡಲಿ ಮತ್ತು ಸರ್ಕಾರೇತರ ಸಂಶೋಧನಾ ಘಟಕಗಳು ಅಥವಾ ಸಂಸ್ಥೆಗಳು ವಿಶೇಷ ಶಿಕ್ಷಣ, ಪುನರ್ ವ್ಯವಸ್ಥೆ ಮತ್ತು ಮಾನವ ಶಕ್ತಿ ಅಭಿವೃದ್ಧಿಯ ಬಗ್ಗೆ ಸಂಶೋಧನೆ ಕೈಗೊಳ್ಳಲು ಅವುಗಳಿಗೆ ಹಣಕಾಸು ನೆರವನ್ನು ಸಂಬಂಧಪಟ್ಟ ಸರ್ಕಾರಗಳು ಒದಗಿಸತಕ್ಕದ್ದು.

## ಅಧ್ಯಾಯ - X

## ಅಂಗವಿಕಲ ವ್ಯಕ್ತಿಗಳಿಗಾಗಿರುವ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು

**50. ಸಕ್ಷಮ ಪ್ರಾಧಿಕಾರ.-** ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂತೆ ಯಾವುದೇ ಪ್ರಾಧಿಕಾರವನ್ನು ಸಕ್ಷಮ ಪ್ರಾಧಿಕಾರ ಎಂದು ನೇಮಕ ಮಾಡಬಹುದು.

**51. ನೋಂದಣಿ ಪ್ರಮಾಣ ಪತ್ರದ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ಸ್ಥಾಪಿಸದಿರುವುದು ಅಥವಾ ನಿರ್ವಹಿಸದಿರುವುದು.-** ಈ ಅಧಿನಿಯಮದ ಮೇರೆಗೆ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಸಕ್ಷಮ ಪ್ರಾಧಿಕಾರವು ಈ ಸಂಬಂಧವಾಗಿ ನೀಡಿದ ನೋಂದಣಿ ಪ್ರಮಾಣಪತ್ರದ ಮೇರೆಗೆ ಮತ್ತು ಅದರ ಅನುಸಾರವಾಗಿ ಹೊರತು ಯಾವನೇ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳಿಗಾಗಿ ಯಾವುದೇ ಸಂಸ್ಥೆಯನ್ನು ಸ್ಥಾಪಿಸತಕ್ಕದ್ದಲ್ಲ ಅಥವಾ ನಿರ್ವಹಿಸತಕ್ಕದ್ದಲ್ಲ:

ಪರಂತು, ಒಬ್ಬ ವ್ಯಕ್ತಿಯು ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟ ಪೂರ್ವದಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ ಸಂಸ್ಥೆಯೊಂದನ್ನು ನಿರ್ವಹಿಸುತ್ತಿದ್ದಲ್ಲಿ ಅಂಥ ಪ್ರಾರಂಭದಿಂದ ಆರು ತಿಂಗಳ ಅವಧಿಯವರೆಗೆ ಅಂಥ ಸಂಸ್ಥೆಯ ನಿರ್ವಹಣೆಯನ್ನು ಮುಂದುವರಿಸಬಹುದು ಮತ್ತು ಸದರಿ ಆರು ತಿಂಗಳ ಅವಧಿಯೊಳಗಾಗಿ ಈ ಪ್ರಕರಣದ ಮೇರೆಗೆ ಅಂಥ ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರೆ, ಅಂಥ ಅರ್ಜಿ ವಿಲೆ ಆಗುವವರೆಗೆ ಅದನ್ನು ಮುಂದುವರೆಸಿಕೊಂಡು ಹೋಗತಕ್ಕದ್ದು.

**52. ನೋಂದಣಿ ಪ್ರಮಾಣಪತ್ರ.-** (1) ನೋಂದಣಿ ಪ್ರಮಾಣಪತ್ರಕ್ಕಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆ ಮತ್ತು ರೀತಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(2) (1) ನೇ ಉಪ-ಪ್ರಕರಣದ ಮೇರೆಗಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಕ್ಷಮ ಪ್ರಾಧಿಕಾರಿಯು ತಾನು ವಿಹಿತವೆಂದು ಭಾವಿಸಬಹುದಾದಂಥ ವಿಚಾರಣೆಗಳನ್ನು ನಡೆಸತಕ್ಕದ್ದು ಮತ್ತು ಅಂಥ ಅರ್ಜಿದಾರನು ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪಾಲಿಸಿದ್ದಾನೆಂದು ಮನದಟ್ಟಾದರೆ ಅರ್ಜಿದಾರನಿಗೆ ಅಂಥ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದು ಮತ್ತು ಸಕ್ಷಮ ಪ್ರಾಧಿಕಾರಕ್ಕೆ ಹಾಗೆ ಮನದಟ್ಟಾಗದಿದ್ದರೆ ಪ್ರಮಾಣ ಪತ್ರಕ್ಕಾಗಿ ಸಲ್ಲಿಸಿದ್ದ ಅಂಥ ಅರ್ಜಿಯನ್ನು ಆದೇಶದ ಮೂಲಕ ತಿರಸ್ಕರಿಸತಕ್ಕದ್ದು:

ಪರಂತು, ಪ್ರಮಾಣ ಪತ್ರ ನೀಡಲು ನಿರಾಕರಿಸುವ ಆದೇಶ ಹೊರಡಿಸುವುದಕ್ಕೆ ಮುಂಚೆ ಸಕ್ಷಮ ಪ್ರಾಧಿಕಾರಿಯು ಅರ್ಜಿದಾರನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡತಕ್ಕದ್ದು ಮತ್ತು ಪ್ರಮಾಣ ಪತ್ರ ನೀಡಲು ನಿರಾಕರಿಸುವ ಪ್ರತಿಯೊಂದು ಆದೇಶವನ್ನು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅರ್ಜಿದಾರನಿಗೆ ತಿಳಿಸತಕ್ಕದ್ದು.

(3) ಯಾವ ಸಂಸ್ಥೆಯು ನೋಂದಣಿಗಾಗಿ ಅರ್ಜಿ ಸಲ್ಲಿಸಿದೆಯೋ ಆ ಸಂಸ್ಥೆಯು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಸೌಲಭ್ಯಗಳನ್ನು ಮತ್ತು ಗುಣಮಟ್ಟಗಳನ್ನು ಒದಗಿಸುವ ಸ್ಥಿತಿಯಲ್ಲಿ ಇಲ್ಲದಿದ್ದರೆ, ಅಂಥ ಸಂಸ್ಥೆಗೆ (2) ನೇ ಉಪ-ಪ್ರಕರಣದ ಮೇರೆಗೆ ಯಾವುದೇ ನೋಂದಣಿ ಪ್ರಮಾಣ ಪತ್ರವನ್ನು ನೀಡತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಮಂಜೂರು ಮಾಡಿದ ಒಂದು ನೋಂದಣಿ ಪ್ರಮಾಣಪತ್ರವು,-

(ಎ) 53ನೇ ಪ್ರಕರಣದ ಮೇರೆಗೆ ಅದನ್ನು ರದ್ದುಪಡಿಸಿರುವ ಹೊರತು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ಅವಧಿಯವರೆಗೆ ಜಾರಿಯಲ್ಲಿರತಕ್ಕದ್ದು;

(ಬಿ) ಅಂಥಹುದೇ ಅವಧಿಯವರೆಗೆ ಕಾಲಕಾಲಕ್ಕೆ ನವೀಕರಿಸಬಹುದು; ಮತ್ತು

(ಸಿ) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು.

(5) ನೋಂದಣಿ ಪ್ರಮಾಣ ಪತ್ರದ ನವೀಕರಣಕ್ಕಾಗಿ ಅರ್ಜಿಯನ್ನು ಅದರ ಮಾನ್ಯತೆಯ ಅವಧಿಗೆ ಮುಂಚೆ ಅರವತ್ತು ದಿನಗಳಿಗಿಂತ ಕಡಿಮೆ ಇಲ್ಲದಂತೆ ಸಲ್ಲಿಸತಕ್ಕದ್ದು.

(6) ಸಂಸ್ಥೆಯು ನೋಂದಣಿ ಪ್ರಮಾಣ ಪತ್ರವನ್ನು ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

**53. ಪ್ರಮಾಣ ಪತ್ರದ ರದ್ದಿಯಾತಿ.-** (1) 52ನೇ ಪ್ರಕರಣದ (2) ನೇ ಉಪ-ಪ್ರಕರಣದ ಮೇರೆಗೆ ಮಂಜೂರು ಮಾಡಿದ ಪ್ರಮಾಣ ಪತ್ರವನ್ನು ಹೊಂದಿರುವ ವ್ಯಕ್ತಿಯು,-

(ಎ) ಪ್ರಮಾಣ ಪತ್ರದ ನೀಡಿಕೆ ಅಥವಾ ನವೀಕರಣಕ್ಕಾಗಿ ಸಲ್ಲಿಸಿದ ಯಾವುದೇ ಅರ್ಜಿಗೆ ಸಂಬಂಧಪಟ್ಟಂತೆ ಕೊಟ್ಟ ಹೇಳಿಕೆಯು ಸರಿಯಾಗಿಲ್ಲವೆಂದು ಅಥವಾ ಮುಖ್ಯ ವಿವರಗಳು ಸುಳ್ಳಾಗಿವೆಯೆಂದು; ಅಥವಾ

(ಬಿ) ಪ್ರಮಾಣ ಪತ್ರವನ್ನು ಯಾವ ನಿಯಮಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು ನೀಡಲಾಗಿತ್ತೋ ಅಂಥ ಯಾವುದೇ ನಿಯಮ ಅಥವಾ ಷರತ್ತುಗಳನ್ನು ಉಲ್ಲಂಘಿಸಿರುವನೆಂದು ಅಥವಾ ಉಲ್ಲಂಘಿಸಲು ಕಾರಣನಾಗಿದ್ದಾನೆಂದು

- ಸಕ್ಷಮ ಪ್ರಾಧಿಕಾರವು ನಂಬಲು ಕಾರಣ ಇದ್ದರೆ ಅದು ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ವಿಚಾರಣೆ ಮಾಡಿದ ನಂತರ ಆದೇಶವನ್ನು ಹೊರಡಿಸುವ ಮೂಲಕ ಆ ಪ್ರಮಾಣ ಪತ್ರವನ್ನು ರದ್ದುಪಡಿಸಬಹುದು:

ಪರಂತು, ಅರ್ಜಿದಾರನಿಗೆ ಪ್ರಮಾಣ ಪತ್ರವನ್ನು ಏಕೆ ರದ್ದುಗೊಳಿಸಬಾರದೆಂಬುದಕ್ಕೆ ಕಾರಣಗಳನ್ನು ತೋರಿಸುವಂತೆ ಅವಕಾಶವನ್ನು ನೀಡಿದ ಹೊರತು, ಯಾವುದೇ ಅಂಥ ಆದೇಶವನ್ನು ಮಾಡತಕ್ಕದ್ದಲ್ಲ.

(2) ಒಂದು ಸಂಸ್ಥೆಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು (1) ನೇ ಉಪ-ಪ್ರಕರಣದ ಮೇರೆಗೆ ರದ್ದುಪಡಿಸಿದರೆ ಅಂಥ ರದ್ದಿಯಾತಿಯ ದಿವಸದಿಂದ ಅಂಥ ಸಂಸ್ಥೆಯು ಕಾರ್ಯ ನಿರ್ವಹಿಸುವುದನ್ನು ನಿಲ್ಲಿಸತಕ್ಕದ್ದು:

ಪರಂತು, ರದ್ದಿಯಾತಿಯ ಆದೇಶದ ವಿರುದ್ಧ 54 ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಲು ಅವಕಾಶ ಇದ್ದರೆ,-

(ಎ) ಯಾವುದೇ ಅಪೀಲನ್ನು ಸಲ್ಲಿಸದಿದ್ದರೆ, ಅಂಥ ಅಪೀಲು ಸಲ್ಲಿಸಲು ಗೊತ್ತುಪಡಿಸಿದ ಅವಧಿಯು ಮುಕ್ತಾಯವಾದ ಕೂಡಲೆ; ಅಥವಾ

(ಬಿ) ಅಂಥ ಅಪೀಲನ್ನು ಸಲ್ಲಿಸಲಾಗಿದ್ದು, ಆದರೆ ರದ್ದಿಯಾತಿಯ ಆದೇಶವನ್ನು ಸ್ಥಿರೀಕರಿಸಿದ್ದರೆ, ಅಪೀಲು ಆದೇಶದ ದಿನಾಂಕದಿಂದ

- ಅಂಥ ಸಂಸ್ಥೆಯು ಕಾರ್ಯ ನಿರ್ವಹಿಸುವುದು ನಿಂತುಹೋಗತಕ್ಕದ್ದು.

(3) ಒಂದು ಸಂಸ್ಥೆಗೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ರದ್ದುಗೊಳಿಸಿದ ಮೇಲೆ, ಅಂಥ ರದ್ದಿಯಾತಿಯ ದಿನಾಂಕದಂದು ಅಂಥ ಸಂಸ್ಥೆಯ ನಿವಾಸಿಯಾಗಿರುವ ಯಾವನೇ ಅಂಗವಿಕಲ ವ್ಯಕ್ತಿಯನ್ನು ಸಕ್ಷಮ ಪ್ರಾಧಿಕಾರವು,-

(ಎ) ಅವಳ ಅಥವಾ ಅವನ ತಂದೆ ತಾಯಿಯ ಅಥವಾ ಗಂಡನ ಅಥವಾ ಹೆಂಡತಿಯ ಅಥವಾ ಸಂದರ್ಭಾನುಸಾರ ಕಾನೂನು ಸಮ್ಮತ ಪೋಷಕರ ವಶಕ್ಕೆ ಅವರನ್ನು ಒಪ್ಪಿಸತಕ್ಕದ್ದೆಂದು; ಅಥವಾ

(ಬಿ) ಸಕ್ಷಮ ಪ್ರಾಧಿಕಾರಿಯು ನಿರ್ದಿಷ್ಟಪಡಿಸಿದ ಯಾವುದೇ ಇತರೆ ಸಂಸ್ಥೆಗೆ ವರ್ಗಾಯಿಸತಕ್ಕದ್ದೆಂದು

- ನಿರ್ದೇಶನ ನೀಡಬಹುದು.

(4) ನೋಂದಣಿ ಪ್ರಮಾಣಪತ್ರವನ್ನು ಹೊಂದಿರುವ ಪ್ರತಿಯೊಂದು ಸಂಸ್ಥೆಯು ಈ ಪ್ರಕರಣದ ಮೇರೆಗೆ ಅದನ್ನು ರದ್ದುಪಡಿಸಿದಾಗ, ಅಂಥ ರದ್ದಿಯಾತಿಯಾದ ಕೂಡಲೇ ಅಂಥ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರಕ್ಕೆ ಹಿಂದಿರುಗಿಸತಕ್ಕದ್ದು.

**54. ಅಪೀಲು.**- (1) ಪ್ರಮಾಣ ಪತ್ರದ ನೀಡಿಕೆಯನ್ನು ನಿರಾಕರಿಸುವ ಅಥವಾ ಪ್ರಮಾಣ ಪತ್ರವನ್ನು ರದ್ದುಗೊಳಿಸುವ ಸಕ್ಷಮ ಪ್ರಾಧಿಕಾರದ ಆದೇಶದಿಂದಾಗಿ ಬಾಧಿತನಾದ ಯಾರೇ ವ್ಯಕ್ತಿಯು, ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂತಹ ಅವಧಿಯೊಳಗಾಗಿ ಅಂಥ ನಿರಾಕರಣೆ ಅಥವಾ ರದ್ದಿಯಾತಿಯ ವಿರುದ್ಧ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

(2) ಅಂಥ ಅಪೀಲಿನ ಮೇಲೆ ರಾಜ್ಯ ಸರ್ಕಾರ ನೀಡುವ ಆದೇಶವು ಅಂತಿಮವಾಗಿರತಕ್ಕದ್ದು.

**55. ಕೇಂದ್ರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ನಿರ್ವಹಿಸುತ್ತಿರುವ ಸಂಸ್ಥೆಗಳಿಗೆ ಈ ಅಧಿನಿಯಮವು ಅನ್ವಯವಾಗದಿರುವುದು.**- ಈ ಅಧ್ಯಾಯದಲ್ಲಿರುವುದು ಯಾವುದೂ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ನಿರ್ವಹಿಸುತ್ತಿರುವ ಅಂಗವಿಕಲ ವ್ಯಕ್ತಿಗಳ ಸಂಸ್ಥೆಗೆ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ - XI

### ತೀವ್ರ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗಾಗಿ ಸಂಸ್ಥೆ

**56. ತೀವ್ರ ಅಂಗವಿಕಲತೆ ಹೊಂದಿದ ವ್ಯಕ್ತಿಗಳಿಗಾಗಿ ಸಂಸ್ಥೆ .**- ಸಂಬಂಧಪಟ್ಟ ಸರ್ಕಾರವು ತೀವ್ರ ಅಂಗವಿಕಲತೆ ಹೊಂದಿದ ವ್ಯಕ್ತಿಗಳಿಗಾಗಿ ತಾನು ಸೂಕ್ತವೆಂದು ಭಾವಿಸುವಂಥ ಸ್ಥಳಗಳಲ್ಲಿ ಸಂಸ್ಥೆಗಳನ್ನು ಸ್ಥಾಪಿಸಬಹುದು ಮತ್ತು ನಿರ್ವಹಿಸಬಹುದು.

(2) ಸಮುಚಿತ ಸರ್ಕಾರವು, (1) ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಲಾದ ಸಂಸ್ಥೆಯನ್ನು ಹೊರತುಪಡಿಸಿ ಯಾವುದೇ ಸಂಸ್ಥೆಯು ತೀವ್ರ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗೆ ಪುನರ್ವಸತಿ ಕಲ್ಪಿಸಲು ಅರ್ಹವಿರುವುದೆಂದು ಅಭಿಪ್ರಾಯಪಟ್ಟಲ್ಲಿ, ಸರ್ಕಾರವು ಅಂಥ ಸಂಸ್ಥೆಗೆ ಈ ಅಧಿನಿಯಮದ ಉದ್ದೇಶಕ್ಕಾಗಿ ತೀವ್ರ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳ ಸಂಸ್ಥೆ ಎಂಬುದಾಗಿ ಮಾನ್ಯತೆ ನೀಡಬಹುದು:

ಪರಂತು, ಯಾವುದೇ ಸಂಸ್ಥೆಯು ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ ಅಗತ್ಯತೆಗಳನ್ನು ಪಾಲಿಸಿದ ಹೊರತು ಆ ಸಂಸ್ಥೆಗೆ ಈ ಪ್ರಕರಣದ ಮೇರೆಗೆ ಮಾನ್ಯತೆ ನೀಡತಕ್ಕದ್ದಲ್ಲ.

(3) (1) ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿತವಾದ ಪ್ರತಿಯೊಂದು ಸಂಸ್ಥೆಯು, ಸಂಬಂಧಪಟ್ಟ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಅಂಥ ಷರತ್ತುಗಳನ್ನು ಪಾಲಿಸತಕ್ಕದ್ದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ "ತೀವ್ರ ಅಂಗವಿಕಲತೆ ಹೊಂದಿರುವ ವ್ಯಕ್ತಿ" ಎಂದರೆ ಒಂದು ಅಥವಾ ಹೆಚ್ಚು ಅಂಗವಿಕಲತೆಗಳಲ್ಲಿ ಶೇಕಡಾ 80 ಅಥವಾ ಅದಕ್ಕೂ ಮೀರಿ ಅಂಗವಿಕಲತೆ ಹೊಂದಿರುವ ವ್ಯಕ್ತಿ.

## ಅಧ್ಯಾಯ - XII

### ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಕಮಿಷನರು ಮತ್ತು ಕಮಿಷನರುಗಳು

**57. ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಕಮಿಷನರುಗಳ ನೇಮಕ.**- (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಕ್ಕಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಮುಖ್ಯ ಕಮಿಷನರರನ್ನು ನೇಮಕ ಮಾಡಬಹುದು.

(2) ಒಬ್ಬ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳ ಪುನರ್ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿಶೇಷ ತಿಳಿವಳಿಕೆ ಅಥವಾ ವ್ಯಾವಹಾರಿಕ ಅನುಭವ ಹೊಂದಿದ್ದ ಹೊರತು ಅವನು ಮುಖ್ಯ ಕಮಿಷನರ್ ಆಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(3) ಮುಖ್ಯ ಕಮಿಷನರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಇತರೆ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು

ಇತರ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ) ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(4) ಮುಖ್ಯ ಕಮಿಷನರನು ತನ್ನ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅವನಿಗೆ ನೆರವಾಗಲು ಅಗತ್ಯವಿರುವ ಅಧಿಕಾರಿಗಳ ಮತ್ತು ಇತರೆ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ಕೇಂದ್ರ ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಮುಖ್ಯ ಕಮಿಷನರನಿಗೆ ಅಂಥ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ಒದಗಿಸತಕ್ಕದ್ದು.

(5) ಮುಖ್ಯ ಕಮಿಷನರಿಗೆ ಒದಗಿಸಿದ ಅಧಿಕಾರಿಗಳು ಮತ್ತು ನೌಕರರು ಮುಖ್ಯ ಕಮಿಷನರರ ಸಾಮಾನ್ಯ ಮೇಲ್ವಿಚಾರಣೆ ಮೇರೆಗೆ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(6) ಮುಖ್ಯ ಕಮಿಷನರಿಗೆ ಒದಗಿಸಿದ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

**58. ಮುಖ್ಯ ಕಮಿಷನರ ಪ್ರಕಾರ್ಯಗಳು.–** ಮುಖ್ಯ ಕಮಿಷನರು,–

(ಎ) ಕಮಿಷನರುಗಳ ಕೆಲಸವನ್ನು ಸಮನ್ವಯಗೊಳಿಸತಕ್ಕದ್ದು;

(ಬಿ) ಕೇಂದ್ರ ಸರ್ಕಾರವು ಹಂಚಿದ ನಿಧಿಗಳ ಬಳಕೆಯ ಮೇಲ್ವಿಚಾರಣೆ ನಡೆಸತಕ್ಕದ್ದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಕಲ್ಪಿಸಲಾದ ಹಕ್ಕುಗಳನ್ನು ಮತ್ತು ಪ್ರಯೋಜನಗಳನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳತಕ್ಕದ್ದು;

(ಡಿ) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಅಧಿನಿಯಮದ ಜಾರಿಯ ಬಗ್ಗೆ ಆ ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

**59. ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ನಿರಾಕರಿಸುವುದಕ್ಕೆ ಸಂಬಂಧಪಟ್ಟ ದೂರುಗಳನ್ನು ಮುಖ್ಯ ಕಮಿಷನರು ಗಮನಿಸುವುದು.–** 58ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ ಮುಖ್ಯ ಕಮಿಷನರು ತಾನಾಗಿಯೇ ಅಥವಾ ಬಾಧಿತನಾದ ಯಾವನೇ ವ್ಯಕ್ತಿಯು ನೀಡುವ ಅರ್ಜಿಯ ಮೇಲೆ ಅಥವಾ ಇತರ ರೀತಿಯಲ್ಲಿ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ದೂರುಗಳ ಬಗ್ಗೆ ಅಂದರೆ,–

(ಎ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ನಿರಾಕರಿಸಿರುವ ಬಗ್ಗೆ;

(ಬಿ) ಅಂಗವಿಕಲ ವ್ಯಕ್ತಿಗಳ ಕ್ಷೇಮಾಭಿವೃದ್ಧಿಗಾಗಿ ಮತ್ತು ಹಕ್ಕುಗಳ ಸಂರಕ್ಷಣೆಗಾಗಿ ಸಂಬಂಧಪಟ್ಟ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ರಚಿಸುವ ಅಥವಾ ಹೊರಡಿಸುವ ಕಾನೂನು, ನಿಯಮ, ಉಪ-ನಿಯಮ, ವಿನಿಯಮ, ಕಾರ್ಯ ನಿರ್ವಾಹಕ ಆದೇಶಗಳನ್ನು, ಮಾರ್ಗದರ್ಶನ ಸೂತ್ರಗಳನ್ನು ಅಥವಾ ಸೂಚನೆಗಳನ್ನು ಜಾರಿಗೆ ತರದಿರುವ ಬಗ್ಗೆ

– ಗಮನ ನೀಡತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರದೊಂದಿಗೆ ಅಂಥ ವಿಷಯಗಳನ್ನು ಚರ್ಚಿಸತಕ್ಕದ್ದು.

**60. ಅಂಗವಿಕಲ ವ್ಯಕ್ತಿಗಳಿಗಾಗಿ ಕಮಿಷನರುಗಳ ನೇಮಕ.–** (1) ಪ್ರತಿಯೊಂದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳಿಗಾಗಿ ಅಂಗವಿಕಲ ವ್ಯಕ್ತಿಗಳಿಗಾಗಿ ಒಬ್ಬ ಕಮಿಷನರನನ್ನು ನೇಮಕ ಮಾಡತಕ್ಕದ್ದು.

(2) ಒಬ್ಬ ವ್ಯಕ್ತಿಯು ಅಂಗವಿಕಲ ವ್ಯಕ್ತಿಗಳ ಪುನರ್ ವ್ಯವಸ್ಥೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ವಿಶೇಷ ತಿಳಿವಳಿಕೆ ಅಥವಾ ವ್ಯಾವಹಾರಿಕ ಅನುಭವ ಹೊಂದಿದ್ದ ಹೊರತು ಅವನು ಕಮಿಷನರ್ ಆಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(3) ಕಮಿಷನರಿಗೆ ಸಂದಾಯ ಮಾಡಬಹುದಾದ ಸಂಬಳ ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು (ನಿವೃತ್ತಿ ವೇತನ, ಗ್ರಾಚ್ಯುಟಿ ಮತ್ತು ಇತರೆ ನಿವೃತ್ತಿ ಪ್ರಯೋಜನಗಳೂ ಸೇರಿದಂತೆ) ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(4) ಕಮಿಷನರರು ತನ್ನ ಕಾರ್ಯಗಳನ್ನು ನಿರ್ವಹಿಸುವಲ್ಲಿ ಅವರಿಗೆ ನೆರವಾಗಲು ಅಗತ್ಯವಿರುವ ಅಧಿಕಾರಿಗಳ ಮತ್ತು ಇತರೆ ನೌಕರರ ಸ್ವರೂಪ ಮತ್ತು ಪ್ರವರ್ಗಗಳನ್ನು ರಾಜ್ಯ ಸರ್ಕಾರವು ನಿರ್ಧರಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕಮಿಷನರರಿಗೆ ಅಂಥ ಅಧಿಕಾರಿಗಳನ್ನು ಮತ್ತು ಇತರೆ ನೌಕರರನ್ನು ಒದಗಿಸತಕ್ಕದ್ದು.

(5) ಕಮಿಷನರಿಗೆ ಒದಗಿಸಲಾದ ಅಧಿಕಾರಿಗಳು ಮತ್ತು ನೌಕರರು ಕಮಿಷನರರ ಸಾಮಾನ್ಯ ಮೇಲ್ವಿಚಾರಣೆಯ ಮೇರೆಗೆ ತಮ್ಮ ತಮ್ಮ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(6) ಕಮಿಷನರರಿಗೆ ಒದಗಿಸಲಾದ ಅಧಿಕಾರಿಗಳ ಮತ್ತು ನೌಕರರ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

**61. ಕಮಿಷನರ್ ಅಧಿಕಾರಗಳು.–** ಕಮಿಷನರು ರಾಜ್ಯದೊಳಗೆ,–

(ಎ) ಅಂಗವಿಕಲ ವ್ಯಕ್ತಿಗಳ ಪ್ರಯೋಜನಕ್ಕಾಗಿ ಇರುವ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ರಾಜ್ಯ ಸರ್ಕಾರದ ಇಲಾಖೆಗಳೊಂದಿಗೆ ಸಮಾಲೋಚಿಸಿ ಸಮನ್ವಯಗೊಳಿಸತಕ್ಕುದು;

(ಬಿ) ರಾಜ್ಯ ಸರ್ಕಾರವು ಹಂಚಿದ ನಿಧಿಗಳ ಬಳಕೆಯ ಮೇಲ್ವಿಚಾರಣೆ ನಡೆಸತಕ್ಕುದು;

(ಸಿ) ಅಂಗವಿಕಲ ವ್ಯಕ್ತಿಗಳಿಗೆ ಕಲ್ಪಿಸಲಾದ ಹಕ್ಕುಗಳನ್ನು ಮತ್ತು ಪ್ರಯೋಜನಗಳನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳತಕ್ಕುದು;

(ಡಿ) ಸರ್ಕಾರವು ಗೊತ್ತುಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಅಧಿನಿಯಮದ ಜಾರಿಯ ಬಗ್ಗೆ ರಾಜ್ಯ ಸರ್ಕಾರಕ್ಕೆ ವರದಿ ಮಾಡತಕ್ಕದ್ದು, ಮತ್ತು ಅದರ ಒಂದು ಪ್ರತಿಯನ್ನು ಮುಖ್ಯ ಕಮಿಷನರರಿಗೆ ಕಳುಹಿಸಿ ಕೊಡತಕ್ಕದ್ದು.

**62. ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ನಿರಾಕರಿಸಿರುವುದಕ್ಕೆ ಸಂಬಂಧಪಟ್ಟ ದೂರುಗಳನ್ನು ಕಮಿಷನರು ಗಮನಿಸುವುದು.–** 61ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಕಮಿಷನರು ತಾನಾಗಿಯೇ ಅಥವಾ ಬಾಧಿತನಾದ ಯಾವನೇ ವ್ಯಕ್ತಿಯು ನೀಡುವ ಅರ್ಜಿಯ ಮೇಲೆ ಅಥವಾ ಇತರ ರೀತಿಯಲ್ಲಿ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ ದೂರುಗಳ ಬಗ್ಗೆ ಅಂದರೆ:–

(ಎ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳನ್ನು ನಿರಾಕರಿಸಿರುವ ಬಗ್ಗೆ;

(ಬಿ) ಅಂಗವಿಕಲ ವ್ಯಕ್ತಿಗಳ ಕ್ಷೇಮಾಭಿವೃದ್ಧಿಗಾಗಿ ಮತ್ತು ಹಕ್ಕುಗಳ ಸಂರಕ್ಷಣೆಗಾಗಿ ಸಂಬಂಧಪಟ್ಟ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ರಚಿಸುವ ಕಾನೂನು, ನಿಯಮ, ಉಪವಿಧಿ, ವಿನಿಯಮ, ಕಾರ್ಯ ನಿರ್ವಾಹಕ ಆದೇಶಗಳನ್ನು ಅಥವಾ ಹೊರಡಿಸುವ ಮಾರ್ಗದರ್ಶನ ಸೂತ್ರಗಳನ್ನು ಅಥವಾ ಸೂಚನೆಗಳನ್ನು ಜಾರಿಗೆ ತರದಿರುವ ಬಗ್ಗೆ

- ಗಮನ ನೀಡತಕ್ಕದ್ದು ಮತ್ತು ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಅಂಥ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳತಕ್ಕದ್ದು.

**63. ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರುವುದು.-** ಮುಖ್ಯ ಕಮಿಷನರು ಮತ್ತು ಕಮಿಷನರುಗಳು, ಈ ಅಧಿನಿಯಮದ ಮೇರೆಗಿನ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ, ಈ ಮುಂದಿನ ವಿಷಯಗಳ ಸಂಬಂಧದಲ್ಲಿ, ದಾವೆಯನ್ನು ವಿಚಾರಣೆ ಮಾಡುವಾಗ ದಂಡ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ನ್ಯಾಯಾಲಯದಲ್ಲಿ ನಿಹಿತಗೊಳಿಸಲಾದಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಅವುಗಳೆಂದರೆ:-

(ಎ) ಸಾಕ್ಷಿಗಳನ್ನು ಕರೆಸುವುದು ಮತ್ತು ಹಾಜರಿಯನ್ನು ಒತ್ತಾಯಿಸುವುದು;

(ಬಿ) ಯಾವುದೇ ದಸ್ತಾವೇಜುಗಳನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಅಥವಾ ಅದರ ನಕಲನ್ನು ಕಡ್ಡಾಯವಾಗಿ ಕೋರುವುದು;

(ಡಿ) ಶಪಥಪತ್ರಗಳ ಮೇಲೆ ಸಾಕ್ಷ್ಯಗಳನ್ನು ಪಡೆಯುವುದು; ಮತ್ತು

(ಇ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸುವುದಕ್ಕಾಗಿ ಕಮಿಷನ್‌ಗಳನ್ನು ಹೊರಡಿಸುವುದು.

(2) ಮುಖ್ಯ ಕಮಿಷನರ್‌ನ ಮತ್ತು ಕಮಿಷನರುಗಳ ಮುಂದೆ ಇರುವ ಪ್ರತಿಯೊಂದು ವ್ಯವಹರಣೆಯು ಭಾರತ ದಂಡ ಸಂಹಿತೆಯ 193 ಮತ್ತು 228ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಒಂದು ನ್ಯಾಯಿಕ ವ್ಯವಹರಣೆಯಾಗಿರತಕ್ಕದ್ದು ಮತ್ತು ಮುಖ್ಯ ಕಮಿಷನರು, ಕಮಿಷನರು, ಸಕ್ಷಮ ಪ್ರಾಧಿಕಾರ-ಇವರುಗಳನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಉದ್ದೇಶಕ್ಕಾಗಿ ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**64. ಮುಖ್ಯ ಕಮಿಷನರು ವಾರ್ಷಿಕ ವರದಿಯನ್ನು ತಯಾರಿಸುವುದು.-** (1) ಮುಖ್ಯ ಕಮಿಷನರು ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ಹಿಂದಿನ ವರ್ಷದಲ್ಲಿ ತಮ್ಮ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನೊಳಗೊಂಡ ವಾರ್ಷಿಕ ವರದಿಯನ್ನು ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ತಯಾರಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(2) ಕೇಂದ್ರ ಸರ್ಕಾರವು, ವಾರ್ಷಿಕ ವರದಿಯಲ್ಲಿ ತನಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಮಾಡಿದ ಶಿಫಾರಸಿನ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳನ್ನು ಅಥವಾ ಅಂಥ ಶಿಫಾರಸನ್ನು ಅಥವಾ ಅದರ ಭಾಗವನ್ನು ಒಪ್ಪದಿರುವುದಕ್ಕೆ ಯಾವುದೇ ಕಾರಣಗಳನ್ನು ವಿವರಿಸಿರುವ ಶಿಫಾರಸಿನೊಂದಿಗೆ ಆ ವರದಿಯನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

**65. ಕಮಿಷನರುಗಳು ವಾರ್ಷಿಕ ವರದಿಯನ್ನು ತಯಾರಿಸುವುದು.-** (1) ಕಮೀಷನರು ಪ್ರತಿಯೊಂದು ಹಣಕಾಸು ವರ್ಷಕ್ಕಾಗಿ ಹಿಂದಿನ ವರ್ಷದ ಹಣಕಾಸು ವರ್ಷದಲ್ಲಿ ತಮ್ಮ ಕಾರ್ಯ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪೂರ್ಣ ವಿವರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ ತಯಾರಿಸತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(2) ರಾಜ್ಯ ಸರ್ಕಾರವು ವಾರ್ಷಿಕ ವರದಿಯಲ್ಲಿ ತನಗೆ ಸಂಬಂಧಿಸಿರುವಷ್ಟರ ಮಟ್ಟಿಗೆ ಮಾಡಿದ ಶಿಫಾರಸಿನ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳನ್ನು ಅಥವಾ ಅಂಥ ಶಿಫಾರಸ್ಸನ್ನು ಅಥವಾ ಅದರ ಭಾಗವನ್ನು ಒಪ್ಪದಿರುವುದಕ್ಕೆ ಯಾವುದೇ ಕಾರಣಗಳನ್ನು ವಿವರಿಸಿರುವ ಶಿಫಾರಸ್ಸಿನೊಂದಿಗೆ ಆ ವರದಿಯನ್ನು ಪ್ರತಿಯೊಂದು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ - XIII

### ಸಾಮಾಜಿಕ ಭದ್ರತೆ

**66. ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಪುನರ್‌ವ್ಯವಸ್ಥೆಯನ್ನು ಕೈಗೊಳ್ಳುವುದು.-** (1) ಸಂಬಂಧಪಟ್ಟ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಹಣಕಾಸು ಮತ್ತು ಅಭಿವೃದ್ಧಿ ಮಿತಿಗಳೊಳಗೆ ಎಲ್ಲಾ ಅಂಗವಿಕಲ ವ್ಯಕ್ತಿಗಳ ಪುನರ್ ವ್ಯವಸ್ಥೆಯನ್ನು ಕೈಗೊಳ್ಳತಕ್ಕದ್ದು ಅಥವಾ ಕೈಗೊಳ್ಳುವಂತೆ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ, ಸಂಬಂಧಪಟ್ಟ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಸರ್ಕಾರೇತರ ಸಂಸ್ಥೆಗಳಿಗೆ ಹಣಕಾಸು ನೆರವು ನೀಡತಕ್ಕದ್ದು.

(3) ಸರ್ಕಾರೇತರ ಸರ್ಕಾರಗಳು ಮತ್ತು ಸ್ಥಳೀಯ ಪ್ರಾಧಿಕಾರಗಳು ಪುನರ್ ವ್ಯವಸ್ಥೆಯ ಎಲ್ಲಾ ಕಾರ್ಯ ನೀತಿಗಳನ್ನು ರೂಪಿಸುವಾಗ ಅಂಗವಿಕಲ ವ್ಯಕ್ತಿಗಳಿಗಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮಾಲೋಚಿಸತಕ್ಕದ್ದು.

**67. ಅಂಗವಿಕಲ ನೌಕರರ ವಿಮಾ ಯೋಜನೆ.-** (1) ಸಂಬಂಧಪಟ್ಟ ಸರ್ಕಾರವು ಅಧಿಸೂಚನೆಯ ಮೂಲಕ ತನ್ನ ಅಂಗವಿಕಲ ನೌಕರರ ಪ್ರಯೋಜನಕ್ಕಾಗಿ ವಿಮಾ ಯೋಜನೆಯೊಂದನ್ನು ರೂಪಿಸತಕ್ಕದ್ದು.

(2) ಈ ಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಸಂಬಂಧಪಟ್ಟ ಸರ್ಕಾರವು ವಿಮಾ ಯೋಜನೆಯನ್ನು ರೂಪಿಸುವುದರ ಬದಲು ತನ್ನ ಅಂಗವಿಕಲ ನೌಕರರಿಗಾಗಿ ಒಂದು ಬದಲಿ ಭದ್ರತಾ ಯೋಜನೆಯನ್ನು ರೂಪಿಸತಕ್ಕದ್ದು.

**68. ನಿರುದ್ಯೋಗ ಭತ್ಯೆ.-** ಸಂಬಂಧಪಟ್ಟ ಸರ್ಕಾರಗಳು ತಮ್ಮ ಹಣಕಾಸು ಸಾಮರ್ಥ್ಯ ಮತ್ತು ಅಭಿವೃದ್ಧಿಯ ಮಿತಿಗಳೊಳಗೆ ಅಧಿಸೂಚನೆಯ ಮೂಲಕ ಎರಡು ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ವಿಶೇಷ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿರುವ ಮತ್ತು ಯಾವುದೇ ಲಾಭದಾಯಕ ಉದ್ಯೋಗದಲ್ಲಿ ಇರದ ಅಂಗವಿಕಲ ವ್ಯಕ್ತಿಗಳಿಗೆ ನಿರುದ್ಯೋಗ ಭತ್ಯೆ ಪಾವತಿ ಮಾಡುವುದಕ್ಕಾಗಿ ಯೋಜನೆಯೊಂದನ್ನು ರೂಪಿಸತಕ್ಕದ್ದು.

## ಅಧ್ಯಾಯ - XIV

### ಸಂಕೀರ್ಣ

**69. ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಮೋಸದಿಂದ ಬಳಸಿಕೊಂಡದ್ದಕ್ಕೆ ದಂಡನೆ.-** ಅಂಗವಿಕಲ ವ್ಯಕ್ತಿಗಳಿಗಾಗಿ ಇರುವ ಯಾವುದೇ ಸೌಲಭ್ಯವನ್ನು ಯಾರಾದರೂ ಮೋಸದಿಂದ ಬಳಸಿಕೊಂಡರೆ ಅಥವಾ ಬಳಸಿಕೊಳ್ಳಲು ಪ್ರಯತ್ನಿಸಿದರೆ ಅವನು

ಎರಡು ವರ್ಷಗಳ ಅವಧಿಯವರೆಗಿನ ಕಾರಾವಾಸ ಶಿಕ್ಷೆಯಿಂದ ಅಥವಾ ಇಪ್ಪತ್ತು ಸಾವಿರ ರೂಪಾಯಿವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**70. ಮುಖ್ಯ ಕಮಿಷನರು, ಕಮಿಷನರುಗಳು, ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಯು ಲೋಕ ನೌಕರರಾಗಿರುವುದು.-** ಮುಖ್ಯ ಕಮಿಷನರು, ಕಮಿಷನರುಗಳು ಮತ್ತು ಇತರೆ ಅಧಿಕಾರಿಗಳು ಮತ್ತು ಅವರಿಗೆ ಒದಗಿಸಲಾದ ಸಿಬ್ಬಂದಿಯನ್ನು ಭಾರತ ದಂಡ ಪ್ರಕ್ರಿಯಾ ಸಂಹಿತೆಯ 21 ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**71. ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ರಕ್ಷಣೆ.-** ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶಗಳ ಅನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲುದ್ದೇಶಿಸಿರುವ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರಗಳ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ಸರ್ಕಾರದ ಯಾವನೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**72. ಅಧಿನಿಯಮವು ಯಾವುದೇ ಇತರ ಕಾನೂನಿನ ಜೊತೆಗೆ ಇರುವುದು, ಆದರೆ ಅದನ್ನು ಅಲ್ಪೀಕರಿಸದಿರುವುದು.-**

ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳು ಅಂಗವಿಕಲ ವ್ಯಕ್ತಿಗಳ ಸೌಲಭ್ಯಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನು ಅಥವಾ ಅದರ ಮೇರೆಗೆ ಅಧಿನಿಯಮಿಸಿದ ಅಥವಾ ಹೊರಡಿಸಿದ ಅಥವಾ ನೀಡಲಾದ ಯಾವುವೇ ನಿಯಮಗಳ, ಆದೇಶದ ಅಥವಾ ಸೂಚನೆಗಳ ಜತೆಗೆ ಇರತಕ್ಕದ್ದೇ ಹೊರತು ಅವುಗಳನ್ನು ಅಲ್ಪೀಕರಿಸಿ ಅಲ್ಲ.

**73. ಸಮುಚಿತ ಸರ್ಕಾರದ ನಿಯಮ ರಚನಾಧಿಕಾರ.-** (1) ಸಮುಚಿತ ಸರ್ಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಪಾಲಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ :-

(ಎ) 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಕೆ) ಖಂಡದ ಮೇರೆಗೆ ರಾಜ್ಯ ಸರ್ಕಾರವನ್ನು ಅಥವಾ ಕೇಂದ್ರಾಡಳಿತ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳತಕ್ಕ ರೀತಿ;

(ಬಿ) 4ನೇ ಪ್ರಕರಣದ (7)ನೇ ಉಪ-ಪ್ರಕರಣದ ಮೇರೆಗೆ ಸದಸ್ಯರು ಪಡೆಯತಕ್ಕ ಭತ್ಯೆಗಳು;

(ಸಿ) ಕೇಂದ್ರ ಸಮನ್ವಯ ಸಮಿತಿಯು 7ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ಕಾರ್ಯಕಲಾಪಗಳ ಸಂಬಂಧದಲ್ಲಿ ಪಾಲಿಸತಕ್ಕ ಪ್ರಕ್ರಿಯಾ ನಿಯಮಗಳು;

(ಡಿ) ಕೇಂದ್ರ ಸಮನ್ವಯ ಸಮಿತಿಯು 8ನೇ ಪ್ರಕರಣದ (2)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ನಿರ್ವಹಿಸಬಹುದಾದ ಇತರ ಪ್ರಕಾರ್ಯಗಳು;

(ಇ) 9ನೇ ಪ್ರಕರಣದ (2)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳತಕ್ಕ ರೀತಿ;

(ಎಫ್) 9ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸದಸ್ಯರು ಪಡೆಯತಕ್ಕ ಭತ್ಯೆಗಳು;

(ಜಿ) ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಯು 11ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ಕಾರ್ಯಕಲಾಪಗಳ ಸಂಬಂಧದಲ್ಲಿ ಪಾಲಿಸತಕ್ಕ ಪ್ರಕ್ರಿಯಾ ನಿಯಮಗಳು;

(ಹೆಚ್) 12ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಸಹ ಸದಸ್ಯನನ್ನಾಗಿ ಮಾಡಿಕೊಳ್ಳಬಹುದಾದ ರೀತಿ ಮತ್ತು ಉದ್ದೇಶಗಳು;

(ಐ) ಕೇಂದ್ರ ಕಾರ್ಯ ನಿರ್ವಾಹಕ ಸಮಿತಿಗೆ ಸಹ ಸದಸ್ಯರನ್ನಾಗಿ ನೇಮಕ ಮಾಡಿಕೊಂಡ ವ್ಯಕ್ತಿಯು 12ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸತಕ್ಕ ಫೀಜುಗಳು ಮತ್ತು ಭತ್ಯೆಗಳು;

(ಜೆ) 14ನೇ ಪ್ರಕರಣದ (7)ನೇ ಉಪ-ಪ್ರಕರಣದ ಮೇರೆಗೆ ಸದಸ್ಯರು ಪಡೆಯತಕ್ಕ ಭತ್ಯೆಗಳು;

(ಕೆ) ರಾಜ್ಯ ಸಮನ್ವಯ ಸಮಿತಿಯು 17ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ಕಾರ್ಯಕಲಾಪಗಳ ಸಂಬಂಧದಲ್ಲಿ ಪಾಲಿಸತಕ್ಕ ಪ್ರಕ್ರಿಯಾ ನಿಯಮಗಳು;

(ಎಲ್) ರಾಜ್ಯ ಸಮನ್ವಯ ಸಮಿತಿಯು 18ನೇ ಪ್ರಕರಣದ (2)ನೇ ಉಪಪ್ರಕರಣದ (ಜಿ) ಖಂಡದ ಮೇರೆಗೆ ನಿರ್ವಹಿಸಬಹುದಾದ ಇತರೆ ಪ್ರಕಾರ್ಯಗಳು;

(ಎಂ) 19ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸದಸ್ಯರು ಪಡೆಯತಕ್ಕ ಭತ್ಯೆಗಳು;

(ಎನ್) ರಾಜ್ಯ ಕಾರ್ಯ ನಿರ್ವಾಹಕ ಸಮಿತಿಯು 21ನೇ ಪ್ರಕರಣದ ಮೇರೆಗೆ ತನ್ನ ಸಭೆಗಳಲ್ಲಿ ನಡೆಸುವ ಕಾರ್ಯಕಲಾಪಗಳ ಸಂಬಂಧದಲ್ಲಿ ಪಾಲಿಸತಕ್ಕ ಪ್ರಕ್ರಿಯಾ ನಿಯಮಗಳು;

(ಓ) 22ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಒಬ್ಬ ವ್ಯಕ್ತಿಯನ್ನು ಸಹ ಸದಸ್ಯನನ್ನಾಗಿ ನೇಮಕ ಮಾಡಿಕೊಳ್ಳಬಹುದಾದ ರೀತಿ ಮತ್ತು ಉದ್ದೇಶಗಳು;

(ಪಿ) ರಾಜ್ಯ ಕಾರ್ಯ ನಿರ್ವಾಹಕ ಸಮಿತಿಗೆ ಸಹ ಸದಸ್ಯನಾಗುವ ವ್ಯಕ್ತಿಯು 22ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಬಹುದಾದ ಫೀಜುಗಳು ಮತ್ತು ಭತ್ಯೆಗಳು;

(ಕ್ಯೂ) ಪ್ರತಿಯೊಂದು ಕಾರ್ಯ ಸಂಸ್ಥೆಯ ನಿಯೋಜಕನು ಒದಗಿಸಬೇಕಾದ ಮಾಹಿತಿ ಅಥವಾ ವಿವರಪಟ್ಟಿ ಮತ್ತು ಅಂಥ ಮಾಹಿತಿ ಅಥವಾ ವಿವರಪಟ್ಟಿಯನ್ನು 34ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾವ ವಿಶೇಷ ಉದ್ಯೋಗ ವಿನಿಮಯ ಕೇಂದ್ರಕ್ಕೆ ಒದಗಿಸತಕ್ಕದ್ದೋ ಆ ಕೇಂದ್ರ;

(ಆರ್) 37ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ನಿಯೋಜಕನು ದಾಖಲೆಗಳನ್ನು ಇಡತಕ್ಕ ನಮೂನೆ ಮತ್ತು ರೀತಿ;

(ಎಸ್) 52ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಒಂದು ಅರ್ಜಿಯನ್ನು ಸಲ್ಲಿಸತಕ್ಕ ನಮೂನೆ ಮತ್ತು ರೀತಿ;

(ಟಿ) 52ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನಿರಾಕರಣೆಯ ಆದೇಶವನ್ನು ತಿಳಿಸತಕ್ಕ ರೀತಿ;

(ಯು) 52ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಒದಗಿಸಬೇಕಾದ ಅಥವಾ ನಿರ್ವಹಿಸಬೇಕಾದ ಸೌಲಭ್ಯಗಳು ಅಥವಾ ಪ್ರಮಾಣಗಳು;

(ವಿ) 52ನೇ ಪ್ರಕರಣದ (4)ನೇ ಉಪ-ಪ್ರಕರಣದ (ಎ) ಖಂಡದ ಮೇರೆಗೆ ನೋಂದಣಿ ಪ್ರಮಾಣ ಪತ್ರವು ಮಾನ್ಯವಾಗಿರತಕ್ಕ ಅವಧಿ;

(ಡಬ್ಲ್ಯು) 52ನೇ ಪ್ರಕರಣದ (4)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗೆ ನೋಂದಣಿ ಪ್ರಮಾಣ ಪತ್ರವನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೀಡತಕ್ಕುದೋ ಆ ನಮೂನೆ ಮತ್ತು ಷರತ್ತುಗಳು;

(ಎಕ್ಸ್) 54ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಯಾವ ಅವಧಿಯೊಳಗೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕದ್ದೋ ಆ ಅವಧಿ;

(ವೈ) ತೀವ್ರ ಅಂಗವಿಕಲತೆ ಹೊಂದಿದ ವ್ಯಕ್ತಿಗಳ ಸಂಸ್ಥೆಯನ್ನು 56ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ನಿರ್ವಹಿಸತಕ್ಕ ರೀತಿ ಮತ್ತು ಆ ಸಂಬಂಧದಲ್ಲಿ ಪಾಲಿಸತಕ್ಕ ಷರತ್ತುಗಳು;

(ಜಡ್) 57ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಮುಖ್ಯ ಕಮಿಷನರ್‌ನ ಸಂಬಳ, ಭತ್ಯೆ ಮತ್ತು ಇತರೆ ಸೇವಾ ನಿಬಂಧನೆ ಮತ್ತು ಷರತ್ತುಗಳು;

(ಜಡ್‌ಎ) 57ನೇ ಪ್ರಕರಣದ (6)ನೇ ಉಪ-ಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ನೌಕರರ ಸಂಬಳ, ಭತ್ಯೆ ಮತ್ತು ಇತರೆ ಸೇವಾ ಷರತ್ತುಗಳು;

(ಜಡ್‌ಬಿ) ಮುಖ್ಯ ಕಮಿಷನರು 58ನೇ ಪ್ರಕರಣದ (ಡಿ) ಖಂಡದ ಮೇರೆಗೆ ಕೇಂದ್ರ ಸರ್ಕಾರಕ್ಕೆ ವರದಿ ಕಳುಹಿಸತಕ್ಕ ಮಧ್ಯಂತರಗಳು;

(ಜಡ್‌ಸಿ) 60ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಕಮಿಷನರ್‌ನ ಸಂಬಳ, ಭತ್ಯೆ ಮತ್ತು ಇತರ ಸೇವಾ ನಿಬಂಧನೆ ಮತ್ತು ಷರತ್ತುಗಳು;

(ಜಡ್‌ಡಿ) 60ನೇ ಪ್ರಕರಣದ (6)ನೇ ಉಪ-ಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ನೌಕರರ ಸಂಬಳ, ಭತ್ಯೆ ಮತ್ತು ಇತರೆ ಸೇವಾ ಷರತ್ತುಗಳು;

(ಜಡ್‌ಇ) 61ನೇ ಪ್ರಕರಣದ (ಡಿ) ಖಂಡದ ಮೇರೆಗೆ ಕಮಿಷನರು ರಾಜ್ಯ ಸರ್ಕಾರಕ್ಕೆ ವರದಿಗಳನ್ನು ಕಳುಹಿಸತಕ್ಕ ಮಧ್ಯಂತರಗಳು;

(ಜಡ್‌ಎಫ್) 64ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಾರ್ಷಿಕ ವರದಿಗಳನ್ನು ತಯಾರಿಸತಕ್ಕ ನಮೂನೆ ಮತ್ತು ಕಾಲ;

(ಜಡ್‌ಜಿ) 65ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಾರ್ಷಿಕ ವರದಿ ತಯಾರಿಸತಕ್ಕ ನಮೂನೆ ಮತ್ತು ಕಾಲ;

(ಜಡ್‌ಹೆಚ್) ಗೊತ್ತುಪಡಿಸಬೇಕಾದ ಅಥವಾ ಗೊತ್ತುಪಡಿಸಬಹುದಾದ ಯಾವುದೇ ಇತರ ವಿಷಯಗಳು.

(3) 33ನೇ ಪ್ರಕರಣದ ಪರಂತುಕದ, 47ನೇ ಪ್ರಕರಣದ (2)ನೇ ಉಪ-ಪ್ರಕರಣದ ಪರಂತುಕದ ಮೇರೆಗೆ ಕೇಂದ್ರ ಸರ್ಕಾರವು ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, 27ನೇ ಪ್ರಕರಣ, 30ನೇ ಪ್ರಕರಣ, 38ನೇ ಪ್ರಕರಣದ (1)ನೇ ಉಪ-ಪ್ರಕರಣ, 42ನೇ ಪ್ರಕರಣ, 43ನೇ ಪ್ರಕರಣ, 67ನೇ ಪ್ರಕರಣ, 68ನೇ ಪ್ರಕರಣದ ಮೇರೆಗೆ ಅದು ರೂಪಿಸಿದ ಪ್ರತಿಯೊಂದು ಯೋಜನೆಯನ್ನು ಮತ್ತು (1)ನೇ ಉಪ-ಪ್ರಕರಣದ ಮೇರೆಗೆ ಅದು ರಚಿಸಿದ ಪ್ರತಿಯೊಂದು

ನಿಯಮವನ್ನು, ಅವುಗಳನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಇಡತಕ್ಕದ್ದು, ಮತ್ತು ಮೇಲೆ ಹೇಳಲಾದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನ ಮುಕ್ತಾಯವಾಗುವ ಮುಂಚೆ, ಆ ನಿಯಮ, ಅಧಿಸೂಚನೆ ಅಥವಾ ಯೋಜನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮ, ಅಧಿಸೂಚನೆ ಅಥವಾ ಯೋಜನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬಾರದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮ, ಅಧಿಸೂಚನೆ ಅಥವಾ ಯೋಜನೆಯು ಆ ತರುವಾಯ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದು ಅಥವಾ ಸಂದರ್ಭನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಸಂದರ್ಭಾನುಸಾರ ಆ ನಿಯಮ, ಅಧಿಸೂಚನೆ ಅಥವಾ ಯೋಜನೆ ಮೇರೆಗೆ ಈ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

(4) ರಾಜ್ಯ ಸರ್ಕಾರವು 33ನೇ ಪ್ರಕರಣದ ಪರಂತುಕದ, 47ನೇ ಪ್ರಕರಣದ (2)ನೇ ಉಪ-ಪ್ರಕರಣದ ಪರಂತುಕದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, 27ನೇ ಪ್ರಕರಣ, 30ನೇ ಪ್ರಕರಣ, 38ನೇ ಪ್ರಕರಣದ (1)ನೇ ಉಪ-ಪ್ರಕರಣ, 42ನೇ ಪ್ರಕರಣ, 43ನೇ ಪ್ರಕರಣ, 68ನೇ ಪ್ರಕರಣದ ಮೇರೆಗೆ ಅದು ರೂಪಿಸಿದ ಪ್ರತಿಯೊಂದು ಯೋಜನೆಯನ್ನು ಮತ್ತು (1)ನೇ ಉಪ-ಪ್ರಕರಣದ ಮೇರೆಗೆ ಅದು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಎರಡು ಸದನಗಳನ್ನು ಹೊಂದಿದ್ದರೆ ಅಂಥ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನ ಮಂಡಲವು ಒಂದು ಸದನವನ್ನು ಹೊಂದಿದ್ದರೆ ಆ ಸದನದ ಮುಂದೆ ಇಡತಕ್ಕದ್ದು.

74. * * * *

* * * * *